A

**PROJECT REPORT ON**

# "ಕೋಳಚೆ ಪ್ರದೇಶದ ನಿವಾಸಿ ಸಾಮಾಜೀಕ ಮತ್ತು ಆರ್ಥಿಕ ಸ್ಥಿತಿ ಗತಿ ಕುರಿತು ಸಮಾಜಶಾಸ್ತ್ರೀಯ ಅಧ್ಯಯನ"

*Submitted to the*

**H.K.E. Society's**

**A V PATIL ARTS SCIENCE & COMMERCE COLLEGE ALAND"**

## Submitted By


1. Somanath Mahadev D
2. Krishna Ambrut
3. Sunil Basavaraj
4. Sumit Subhash
5. Shrimanth Gurushantappa


*Under the guidance of*

## Prof. Sangamesh N. Swami


**Department of Sociology**
**A V Patil Arts, Science & Commerce College Aland"**

**2021-22**

ESDT: 1980 STD: 08477 Ph: 202421

Hyderabad Karnataka Education Society's

**A.V. Patil Degree College of Arts, Science & Commerce**

Vidya Nagar, ALAND -585302 - Dist: Kalburagi ,Karnataka

Web: www.hkesociety.org/avpdc -E-mail: avpatilaland@gmail.com

UGC COLLEGE CODE NO. KAGU 002 –Fax: 08477 -202421 NAAC Accredited "B"+ Grade

Ref: No. HKES/ AVPDC/PT/2021-22 Date: 18|04|2021

# CERTIFICATE OF COMPLETION

This is to certify that the Project Report " ಕೋಳಚೆ ಪ್ರದೇಶದ ನಿವಾಸಿ ಸಾಮಾಜೀಕ ಮತ್ತು ಆರ್ಥಿಕ ಸ್ಥಿತಿ ಗತಿ ಕುರಿತು ಸಮಾಜಶಾಸ್ತ್ರೀಯ ಅಧ್ಯಯನ" AT HKES'S A V PATIL ARTS SCIENCE & COMMERCE COLLEGE ALAND " is based on the project carried out under the guidance of Prof. Sangamesh N. Swami and submitted to the Department of Sociology H.K.E. Society's A V Patil Arts, Science & Commerce College Aland.

SUBMITTED BY :

1. Somanath Mahadev D
2. Krishna Ambrut
3. Sunil Basavaraj
4. Sumit Subhash
5. Shrimanth Gurushantappa

Sangamesh Sangamesh

**GUIDE** **HOD** **PRINCIPAL**

Head Dept. of Sociology H.K.E.S's A.V. Patil Degree College Aland

PRINCIPAL H. K. E. SOCIETY'S A.V. Patil Degree College, ALAND

**DATE:** 18|04|2021

**PLACE : ALAND**

ESDT: 1980

STD: 08477 Ph: 202421

Hyderabad Karnataka Education Society's

**A.V. Patil Degree College of Arts, Science & Commerce**

Vidya Nagar, ALAND - 585302 - Dist: Kalburagi ,Karnataka

Web: www.hkesociety.org/avpdc - E-mail: avpatilaland@gmail.com

UGC COLLEGE CODE NO. KAGU 002 - Fax: 08477 - 202421 NAAC Accredited "B"+ Grade

Ref. No. HKES/ AVPDC/PT/2021-22

Date: [illegible]

# ACKNOWLEDGEMENTS

It is my pleasure to express my sincere gratitude to all those who have given guidance and support in completion of this dissertation report. I wish to express my sincere thanks to Prof. Sangamesh N. Swami Head of Department of Sociology for his encouragement which helped in accomplishment of this study.

I wish to express my sincere heartfelt gratitude to Prof. Sangamesh N. Swami department of Sociology for the constant guidance and support in all areas. Without her guidance the outcome of this report would not have been so successful.

# ಅಧ್ಯಾಯ – 1

1.1 ಪ್ರಸ್ತಾವನೆ

1.2 ಪೀಠಿಕೆ

1.3 ಕೊಳಚೆ ಪ್ರದೇಶದ ಅರ್ಥ ಮತ್ತು ವ್ಯಾಖ್ಯೆ

1.4 ಕೊಳಚೆ ಪ್ರದೇಶದ ಸ್ವರೂಪ ಮತ್ತು ವ್ಯಾಪ್ತಿ

1.5 ಕೊಳಚೆ ಪ್ರದೇಶದ ಗುಣಲಕ್ಷಣಗಳು

1.6 ಕೊಳಚೆ ಪ್ರದೇಶದ ಅಸ್ತಿತ್ವಕ್ಕೆ/ಉದ್ಭವಕ್ಕೆ ಕಾರಣಗಳು

1.7 ಕೊಳಚೆ ಪ್ರದೇಶದ ದುಷ್ಪರಿಣಾಮಗಳು

1.8 ಅಧ್ಯಯನದ ಸಮಸ್ಯೆಗಳು

1.9 ಸಮಸ್ಯೆಯ ಕುರಿತು ಹೇಳಿಕೆ

1.10 ಕೊಳಚೆ ಪ್ರದೇಶಗಳ ಸುಧಾರಣಾ/ನಿರ್ಮೂಲನೆ ಕಾರ್ಯದಲ್ಲಿ ರಾಜ್ಯ ಸರ್ಕಾರ ಪ್ರಯತ್ನ.

1.11 ಅಧ್ಯಯನದ ಗುರಿ-ಉದ್ದೇಶಗಳು

21ನೇ ಶತಮಾನದಲ್ಲಿ ನಗರಗಳು ಹೊರನೋಟಕ್ಕೆ ಸುಂದರವಾಗಿ ಕಂಡರೂ ಒಳನೋಟಕ್ಕೆ ಸಮಸ್ಯಾಪೂರಕವಾಗಿವೆ. ನಗರಗಳು ರೋಗಗ್ರಸ್ಥ (ಸಾಮಾಜಿಕ) ಸಮುದಾಯ, ಅಸಹಜ ಜೀವನ ಮತ್ತು ಅಪವರ್ತನ ಪ್ರಧಾನ ಪ್ರದೇಶಗಳೆಂಬ ದೃಢ ಅಭಿಪ್ರಾಯವಿದೆ. ಇವು ಸಮಸ್ಯೆಗಳ ಕೂಪ ಮತ್ತು ವಿಘಟಿತ ಸಮುದಾಯವಾಗಿವೆ. ಈ ಅಭಿಪ್ರಾಯ ಸಂಪೂರ್ಣ ಸತ್ಯವಲ್ಲದಿದ್ದರೂ ಪೂರ್ಣ ಅಸತ್ಯವಂತೂ ಅಲ್ಲ. ಸಮಸ್ಯೆಗಳು ಚಿಕ್ಕ ನಗರಗಳಲ್ಲಿ ಕಡಿಮೆ ಇದ್ದು ದೊಡ್ಡ ನಗರಗಳಲ್ಲಿ ಹೆಚ್ಚಾಗಿದೆ.

ಸಮಾಜಶಾಸ್ತ್ರಜ್ಞರು ನಗರಗಳ ಸಮಸ್ಯೆಗಳು i) ಆರ್ಥಿಕ ii) ಸಾಮಾಜಿಕ ಮತ್ತು iii) ಭೌತಿಕ ಎಂಬ ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ. ಬಡತನ, ನಿರುದ್ಯೋಗ, ಆರ್ಥಿಕ ಅಸಮಾನತೆ, ವಸ್ತು ಪ್ರಾಧಾನ್ಯತೆ, ಕಾರ್ಮಿಕ ಸಮಸ್ಯೆ, ಔದ್ಯೋಗಿಕ ಸಮಸ್ಯೆ, ವರ್ಗ ಸಂಘರ್ಷ, ಕಳ್ಳಸಾಗಣೆ, ಕಳ್ಳತನ, ಮೊಸದ ವ್ಯಾಪಾರ, ಭ್ರಷ್ಟಾಚಾರ, ಮುಂತಾದ ನಗರದ ಆರ್ಥಿಕ ಸಮಸ್ಯೆಗಳು, ಅತಿಯಾದ ಜನಸಾಂದ್ರತೆ, ಜನಸಂಖ್ಯಾ, ಒತ್ತಡ, ವಸತಿ ಸಮಸ್ಯೆ, ಪರಿಸರ ಮಾಲಿನ್ಯ, ಭೂಮಾಫೀಯ ಚಟುವಟಿಕೆಗಳು. ಸಂಚಾರ ದಟ್ಟಣೆ, ದುಬಾರಿ ನೆಲದ ಬೆಲೆ ಮುಂತಾದವು ನಗರದ ಭೌತಿಕ ಸಮಸ್ಯೆಗಳು. ಇವುಗಳಲ್ಲಿ ಕೊಳಚೆ ಪ್ರದೇಶ, ವಸತಿ ಸಮಸ್ಯೆ, ಸಂಚಾರ ದಟ್ಟಣೆ ಮತ್ತು ಮಾಲಿನ್ಯ ಈ ಸಮಸ್ಯೆಗಳನ್ನು ಪರಿಶೀಲಸೋಣ. ಮಾನವನ ಮೂಲಭೂತ ಬೇಡಿಕೆಗಳಾದ ಆಹಾರ, ಬಟ್ಟೆಯಷ್ಟೇ, ಅಲ್ಲದೆ ವಸತಿಯು ಮುಖ್ಯವಾದುದು. ಸೂಕ್ತ ವಸತಿ ವ್ಯವಸ್ಥೆಯು

## 1.3 ಕೊಳಚೆ ಪ್ರದೇಶದ ಅರ್ಥ ಮತ್ತು ವ್ಯಾಖ್ಯೆ :

ಕೊಳಚೆ ಪ್ರದೇಶವನ್ನು ಕುರಿತಾಗಿ ಸರ್ವಸಮ್ಮತವಾದ ಅಭಿಪ್ರಾಯವೇನೂ ಇಲ್ಲ. ಅರ್ಥಶಾಸ್ತ್ರಜ್ಞರು. ನಗರ–ಯೋಜಕರು ಸಮಾಜ ಕಾರ್ಯಕರ್ತರು ಆಡಳಿತಗಾರರು, ಸೇವಾ ಸಂಸ್ಥೆಗಳು ಮತ್ತು ಸಮಾಜಶಾಸ್ತ್ರಜ್ಞರು, ಈ ಒಬ್ಬೊಬ್ಬರೂ ಕೊಳಚೆ ಪ್ರದೇಶವನ್ನು ಕುರಿತು ಭಿನ್ನ ರೀತಿಯ ವ್ಯಾಖ್ಯೆಗಳನ್ನು ಕೊಡುತ್ತಾರೆ. ಅರ್ಥಶಾಸ್ತ್ರಜ್ಞನಿಗೆ ಕೊಳಚೆ ಪ್ರದೇಶವು ಬಡತನದಿಂದ ಕೂಡಿದ ಕ್ಷೀಣಿಸಿದ ಪ್ರದೇಶ.

**ಅರ್ಥ :**

ಕೊಳಚೆ ಪ್ರದೇಶವು ಯಾವುದೇ ಒಂದು ಕಟ್ಟಡವಾಗಿರದೆ ಯಾವಾಗಲೂ ಒಂದು ಪ್ರದೇಶವಾಗಿರುತ್ತದೆ. ಅದರಲ್ಲಿ ಹಲವಾರು ವಾಸದ ಮನೆಗಳು, ಆ ಜನರ ವಾಸದ ಗುಡಿಸಲುಗಳು ಕಳಪೆಮಟ್ಟದ ವಸತಿ ಸೌಕರ್ಯಗಳು ಒಡಗೊಂಡಿರುತ್ತದೆ.

"ಸಾಮಾನ್ಯವಾಗಿ ಪಟ್ಟಣ ಇಲ್ಲವೇ ನಗರಪ್ರದೇಶಗಳಲ್ಲಿ ಬಡವರು, ಕಡುಬಡವರು, ಕೆಳದರ್ಜೆಯ ನೌಕರರು, ಕೂಲಿಕಾರರು, ಉತ್ತಮ ರೀತಿಯಲ್ಲಿ ಸೌಕರ್ಯಗಳನ್ನು ಪಡೆಯಲಾಗದಿದ್ದವರು, ಆರ್ಥಿಕ ದುಸ್ಥಿತಿಯಿಂದ ತೊಳಲಾಡುತ್ತಿರುವವರು ವಾಸಿಸುವ ಅಹಿತಕರ ನೆಲೆಯನ್ನು ಕೊಳಚೆ ಪ್ರದೇಶ

ಎನ್ನುತ್ತೇವೆ. ಅದು ಅತಿಯಾದ ಬಡತನ, ಹೀನ ಜೀವನದಿಂದ ಕೂಡಿದ ತಾಣವಾಗಿರುತ್ತದೆ.

**ವ್ಯಾಖ್ಯೆಗಳು :**

1. **ಜೇಮ್ಸ್ ಪೋರ್ಡ್ ರವರ ಪ್ರಕಾರ :** "ಕೊಳಚೆ ಪ್ರದೇಶವು ಅಲ್ಲಿನ ನಿವಾಸಿಗಳ ಆರೋಗ್ಯ ರಕ್ಷಣೆ ನೈತಿಕ ಅಥವಾ ಕಲ್ಯಾಣಕ್ಕೆ ಮಾರಕವೆನಿಸುಷ್ಟರ ಮಟ್ಟಿಗೆ ಅಥವಾ ಅನಾರೋಗ್ಯಪೂರ್ಣವಾದ ವಾಸದ ಪ್ರದೇಶ."
2. **ಬರ್ಗೆಲ್‌ರವರ ಪ್ರಕಾರ :** "ಕೊಳಚೆ ಪ್ರದೇಶವು ಕಳಪೆ ಮಟ್ಟದ ನಿವಾಸ ಸ್ಥಿತಿಯನ್ನು ಹೊಂದಿರುವ ನಗರದಲ್ಲಿನ ಒಂದು ಪ್ರದೇಶ. ಕೊಳಚೆ ಪ್ರದೇಶವು ಯಾವಾಗಲೂ ಒಂದು ಪ್ರದೇಶವೇ ಹೊರತು ಯಾವುದೇ ಒಂದು ನಿರ್ಲಕ್ಷೀತ ಕಟ್ಟಡವು ಮಾತ್ರ ಕೊಳಚೆ ಪ್ರದೇಶವೆನಿಸಲಾರದು."

## 1.4 ಕೊಳಚೆ ಪ್ರದೇಶದ ಸ್ವರೂಪ ಮತ್ತು ವ್ಯಾಪ್ತಿ :

ಸಾಮಾನ್ಯವಾಗಿ ಪಟ್ಟಣ ಇಲ್ಲವೆ ನಗರ ಪ್ರದೇಶಗಳಲ್ಲಿ ಬಡವರು, ಕಡುಬಡವರು, ಕೆಳದರ್ಜೆಯ ನೌಕರರು, ಕೂಲಿಕಾರರು, ಉತ್ತಮ ರೀತಿಯಲ್ಲಿ ಸೌಕರ್ಯಗಳನ್ನು ಪಡೆಯಲಾಗದಿದ್ದವರು, ಆರ್ಥಿಕ ದುಸ್ಥಿತಿಯಿಂದ ತೊಳಲಾಡುತ್ತಿರುವವರು ವಾಸಿಸುವ ಅಹಿತಕರ ನೆಲೆಯನ್ನು ಕೊಳಚೆ ಪ್ರದೇಶ ಎನ್ನುತ್ತೇವೆ. ಅದು ಅತಿಯಾದ ಬಡತನ ಹೀನ ಪರಿಸ್ಥಿತಿಯಿಂದ ಕೂಡಿದ ತಾಣವಾಗಿರುತ್ತದೆ.

ಅಂತಹ ಕೋಳಚೆ ಪ್ರದೇಶಗಳು ಪಟ್ಟಣ ಇಲ್ಲವೇ ನಗರಗಳಲ್ಲಿ ಉದ್ಯಾನವನ, ಶಾಲಾ ಕಾಲೇಜುಗಳು, ಆಟದ ಮೈದಾನ, ಸ್ಮಶಾನ ಮೊದಲಾದವುಗಳಿಗಾಗಿ ಮೀಸಲಾಗಿರಿಸಿದ್ದ ಜಾಗಗಳಲ್ಲಿ ಅಸ್ತಿತ್ವಗೊಂಡಿರುತ್ತವೆ. ನಗರಗಳ ಹೊರ ವಲಯಗಳಲ್ಲಿನ

## ಕೊಳಚೆ ಪ್ರದೇಶದ ಲಕ್ಷಣಗಳು :

### 1. ಹೊರ ನೋಟ :

ಕೊಳಚೆ ಪ್ರದೇಶವನ್ನು ಅದರ ಹೊರ ನೋಟದಿಂದಲೇ ಗುರುತಿಸಬಹುದಾಗಿರುತ್ತದೆ. ಅದು ನಗರ ಪ್ರದೇಶದ ಅಂದ-ಚೆಂದಕ್ಕಿಂತ ಭಿನ್ನವಾದ ವಿಲಕ್ಷಣದಿಂದ ಕೂಡಿರುತ್ತದೆ. ಆ ಬಗೆಯ ಲಕ್ಷಣ ಬಹಳಮಟ್ಟಿಗೆ ಸಾರ್ವತ್ರಿಕವಾದುದಾಗಿರುತ್ತದೆ. ಸಾಮಾನ್ಯವಾಗಿ ಯಾವುದೋ ಒಂದು ಕಟ್ಟಡ ತನ್ನಷ್ಟಕ್ಕೆ ತಾನೇ ಕೊಳಚೆ ಪ್ರದೇಶವಾಗಲಾರದು. ಟಾರ್ ಡಬ್ಬಗಳ ತಗಡು ಹುಲ್ಲು-ಛಾವಣಿ, ತೆಂಗಿನಗರಿ ಛಾವಣಿ, ಗೋಣಿಚೀಲ, ಚಿಂದಿ ಬಟ್ಟೆ ಮುಂತಾದ ನಿಕೃಷ್ಟ ರೀತಿಯ ಪದಾರ್ಥಗಳನ್ನು ಉಪಯೋಗಿಸಿ ಒತ್ತೊತ್ತಾಗಿ ಕಟ್ಟಲಾಗಿರುವ ಮಣ್ಣಿನ ಗುಡಿಸಲುಗಳನ್ನು ಒಳಗೊಂಡಿರುವ ತಾಣವೇ ಕೊಳಚೆ ಪ್ರದೇಶಗಳಿವೆನಿಸುತ್ತದೆ. ಅದರ ಅಸ್ತಿತ್ವವು ಎದ್ದು ಕಾಣುವ ಸ್ವರೂಪದ್ದಾಗಿರುತ್ತದೆ ಹಾಗೂ ಕೊಳಚೆ ಪ್ರದೇಶಗಳು ತಮ್ಮದೆ ಆದ ವಿಶಿಷ್ಟ ಭೌತಿಕ ಆಕೃತಿಯನ್ನು ಹೊಂದಿವೆ. ಇವು ಮೊದಲು ನೋಟಕ್ಕೆ ಕೊಳಕಾಗಿ ಅಸಹ್ಯವಾಗಿ ಶಿಥಿಲಗೊಂಡಂತೆ ವಕ್ರವಕ್ರವಾಗಿ ಕಾಣುತ್ತವೆ. ಜೋಪಡಿ ಅಥವಾ ಮನೆಗಳು ಯಾವ ಕ್ಷಣದಲ್ಲಾದರೂ ಕುಸಿದು ಬೀಳಬಹುದಾದ ಸ್ಥಿತಿಯಲ್ಲಿರುತ್ತವೆ.

**2. ಜನಸಂಖ್ಯೆ / ಜನದಟ್ಟಣೆ :**

ಸಾಮಾನ್ಯವಾಗಿ ಕೊಳಚೆ ಪ್ರದೇಶಗಳು ಕಿಕ್ಕಿರಿದ ಜನಸಂದಣಿಯಿಂದ ಕೂಡಿರುತ್ತದೆ. ಜನದಟ್ಟಣೆ ಕೊಳಚೆ ಪ್ರದೇಶಗಳ ಒಂದು ಪ್ರಮುಖ ಲಕ್ಷಣವಾಗಿದೆ ಎಂದು ಹೇಳಬಹುದು. ಅಲ್ಲಿ ಒತ್ತು-ಒತ್ತಾಗಿ, ಇಕ್ಕಟ್ಟಾಗಿ ಕಟ್ಟಲಾಗಿರುವ ಗುಡಿಸಲು ಮನೆಗಳು ಅವುಗಳಲ್ಲಿ ಭರ್ತಿಯಾಗಿರುವ ಜನಸಂಖ್ಯೆ ಸಾಮಾನ್ಯವಾಗಿ ಕಂಡು ಬರುತ್ತವೆ. ಇವು ಒಂದು ಚದುರ ಮೈಲಿಗೆ 800 ರಿಂದ 4000 ಜನಸಾಂದ್ರತೆಯನ್ನು ಹೊಂದಿದ್ದು ಒಂದೊಂದು ಜೋಪಡಿ ಮನೆಯಲ್ಲೂ 8 ರಿಂದ 10 ಜನರು ವಾಸಿಸುತ್ತಿರುತ್ತಾರೆ. ಜನರಲ್ಲದೆ ಜೋಪಡಿಗಳಿಂದಲೂ ಕಿಕ್ಕಿರಿದು ತುಂಬಿವೆ.

**3. ಆರ್ಥಿಕ ಅಂತಸ್ತು :**

ಸಾಮಾನ್ಯವಾಗಿ ಕೊಳಚೆ ಪ್ರದೇಶಗಳು ಕಡುಬಡವರು, ಅತೀ ಕಡಿಮೆ ಆದಾಯವುಳ್ಳವರು, ನಿರ್ಗತಿಕರು ಮತ್ತು ಕೂಲಿಕಾರರಿಂದ ತುಂಬಿರುತ್ತವೆ. ಇವು ಬಡತನದ ತವರೂರು. 'ಬಡತನದಿಂದ ಕೊಳಚೆ; ಕೊಳಚೆಯಿಂದ ಬಡತನ' ಇಲ್ಲಿನ ಜನರ ಜೀವನ ಮಟ್ಟ ಅತೀ ನಿಕೃಷ್ಟವಾಗಿದೆ.

**4. ನೈತಿಕತೆ :**

ಕೊಳಚೆ ಪ್ರದೇಶಗಳಲ್ಲಿನ ಜನರ ನೈತಿಕತೆ ತುಂಬಾ ಅಧಃಪತನಕ್ಕೆ ಇಳಿದಿರುತ್ತದೆ. ಅವರು ನೀತಿ ನಿಯಮಗಳನ್ನು ಪಾಲಿಸದಿರುವುದೇ ಹೆಚ್ಚು. ಇಲ್ಲಿನ ನಿವಾಸಿಗಳ ನೈತಿಕ ಮಟ್ಟ ಅತ್ಯಂತ ಕೀಳುಮಟ್ಟದ್ದಾಗಿದ್ದು ನೆರೆ-ಹೊರೆಯ ಪ್ರಜ್ಞೆ, ಸೌಜನ್ಯ ಮತ್ತು ಶಿಷ್ಟಾಚಾರ ಇಲ್ಲಿನ ನಿವಾಸಿಗಳಲ್ಲಿ ಕಂಡುಬರುವುದಿಲ್ಲ. ಮೋಸ, ವಂಚನೆ, ಜೂಜು, ಕುಡಿತ, ಕೊಲೆ,

ಸುಲಿಗೆ, ಬಾಲಾಪರಾಧ, ಕಳ್ಳತನ, ಅಪರಾಧ, ನೈತಿಕ ಲೈಂಗಿಕತೆ, ಕಳ್ಳಸಾಗಣೆ ಮುಂತಾದ ಅನೈತಿಕ ಚಟುವಟಿಕೆಗಳು, ವ್ಯಭಿಚಾರ, ವೇಶ್ಯಾವೃತ್ತಿ ಮೊದಲಾದವುಗಳು ಸಾಮಾನ್ಯ ಸಂಗತಿಗಳಾಗಿರುತ್ತವೆ. ಹಾಗೂ ಇವು ಅನೈತಿಕ, ಅಮಾನುಷ ಮತ್ತು ಅಕ್ರಮ ಚಟುವಟಿಕೆಗಳ ಕೇಂದ್ರಗಳು. ದುರ್ನಡತೆ, ಅಕ್ರಮ ವ್ಯವಹಾರಗಳು, ಮತ್ತು ಅನೇಕ ಸಾಮಾಜಿಕ ಸಮಸ್ಯೆಗಳ ಉಗಮಸ್ಥಾನವೇ ಕೊಳಚೆ ಪ್ರದೇಶಗಳು ಎಂದು ಹೇಳಿದರೆ ತಪ್ಪಾಗಲಾರದು.

**5. ಅನಾರೋಗ್ಯ ಮತ್ತು ಅನೈರ್ಮಲ್ಯ :**

ಕೊಳಚೆ ಪ್ರದೇಶಗಳು ಅನಾರೋಗ್ಯ ಮತ್ತು ನೈರ್ಮಲ್ಯರಹಿತ ಕೂಪಗಳು. ನಗರ ಪ್ರದೇಶದ ಇತರ ನೆಲೆಗಳಿಗೆ ಹೋಲಿಸಿದರೆ ಕೊಳಚೆ ಪ್ರದೇಶಗಳು ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಕಳಪೆ ಸ್ಥಿತಿಯನ್ನುಳ್ಳ ನೆಲೆಗಳಾಗಿರುತ್ತವೆ. ಇಲ್ಲಿ ನಾಗರಿಕ ಸೌಲಭ್ಯಗಳಾದ ಕುಡಿಯುವ ನೀರು, ಚರಂಡಿ, ಕಕ್ಕಸು, ಸ್ನಾನದ ಮನೆ, ಸ್ವಚ್ಛಗಾಳಿ, ಬೆಳಕು ಮತ್ತು ರಸ್ತೆಗಳ ಅಭಾವವಿದೆ..

ಹೀಗಾಗಿ ಅವುಗಳಲ್ಲಿನ ಜನರ ಆರೋಗ್ಯವು ಶಾರೀರಿಕವಾಗಿ ಹಾಗೂ ಮಾನಸಿಕವಾಗಿ ಬಹಳಮಟ್ಟಿಗೆ ಕುಂಠಿತವಾಗಿರುತ್ತದೆ. ಪರಿಸರವು ನೈರ್ಮಲ್ಯರಹಿತ ವಾಗಿರುತ್ತದೆ. ಎಲ್ಲೆಲ್ಲೂ ಅಶುಚಿತ್ವ ತಾಂಡವಾಡುತ್ತಿರುತ್ತದೆ. 'ಶುಚಿತ್ವವೇ ದೇವತ್ವ' ಎಂಬ ಮಾತು ಅಲ್ಲಿ ತನ್ನ ಬೆಲೆಯನ್ನು ಕಳೆದುಕೊಂಡಿರುತ್ತದೆ. ಸಾರ್ವಜನಿಕ ಸೌಲಭ್ಯಗಳ ಅಭಾವದಿಂದ ನೈರ್ಮಲ್ಯದ ಪರಿಸ್ಥಿತಿ ತುಂಬಾ ಗಂಭೀರವಾಗಿರುತ್ತದೆ. ಸೊಳ್ಳೆ, ನೊಣ, ಇಲಿ ಹೆಗ್ಗಣಗಳು ವ್ಯಾಪಕವಾಗಿ ಕಂಡುಬರುತ್ತವೆ. ತತ್ ಫಲವಾಗಿ ರೋಗರುಜಿನಗಳು

ಹೆಚ್ಚು ಹೆಚ್ಚಾಗಿ ತಲೆದೋರಬಹುದಾದ ಸಂಭವವಿರುತ್ತದೆ. ಮರಣ ದರ ಅಧಿಕವಾಗಿರಬಹುದಾದ ಸಾಧ್ಯತೆ ಇರುತ್ತದೆ.

**6. ಸಾಮಾಜಿಕ ಪ್ರತ್ಯೇಕತೆ :**

ಕೊಳಚೆ ಪ್ರದೇಶಗಳು ನಗರಗಳ ಮಧ್ಯ ಇದ್ದರೂ ಹೊರಗಿನ ಪ್ರಪಂಚದಿಂದ ಪ್ರತ್ಯೇಕಗೊಂಡಿವೆ. ಇಲ್ಲಿನ ನಿವಾಸಿಗಳು ತಮ್ಮದೇ ಆದ ಪ್ರಪಂಚವನ್ನು ಸೃಷ್ಟಿಸಿಕೊಂಡಿರುತ್ತಾರೆ. ಹೊರಗಿನವರು ಇವರ ಸಹವಾಸದಿಂದ ದೂರವಿದ್ದುಕೊಂಡು ಕೊಂಕು ದೃಷ್ಟಿಯಿಂದ ನೋಡುತ್ತಾರೆ. ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕಡಿಮೆ. ಸಂಕುಚಿತ ಮತ್ತು ಸಂಶಯಾತ್ಮಕ ದೃಷ್ಟಿಯುಳ್ಳವರು. ಕೊಳಚೆ ನಿವಾಸಿಗಳಲ್ಲಿ ನಾಗರಿಕ ಪ್ರಜ್ಞೆ ಕಡಿಮೆಯಿದ್ದು, ಹಕ್ಕು ಬಾಧ್ಯತೆಗಳ ಅರಿವಿಲ್ಲದ, ಕೀಳರಿಮೆ ಹೊಂದಿರುತ್ತಾರೆ.

**7. ಸಾಮಾಜಿಕ ಪರಿಸ್ಥಿತಿ :**

ಶಾಶ್ವತ ನೆಲೆಯಿಲ್ಲದೆ ಅಲೆಮಾರಿಗಳ ರೀತಿಯಲ್ಲಿ ವಾಸಿಸುವ ಕೊಳಚೆ ನಿವಾಸಿಗಳಲ್ಲಿ ಸಾಮಾಜಿಕ ಸಂಪರ್ಕ, ನೆರೆ–ಹೊರೆ ಭಾವನೆಯ ಕೊರತೆಯಿಂದ ಸಾಮಾಜಿಕ ವಿಘಟನೆ ಗೋಚರಿಸುತ್ತದೆ. ವಸತಿಹೀನ ಪುರುಷರ ಮತ್ತು ಅವಿವಾಹಿತರ ನೆಲೆ ಅಸ್ಥಿರವಾದ್ದು. ವೈವಾಹಿಕ ಸಂಬಂಧ ಮತ್ತು ಕೌಟುಂಬಿಕ ಸ್ಥಿರತೆ ವಿವಾದಿತವಾದದು.

## 8. ಕೊಳಚೆ ಪ್ರದೇಶದ ಶಾಶ್ವತೆ :

ತೀವ್ರಗತಿಯಲ್ಲಿ ಬೆಳೆಯುವ ನಗರಗಳಲ್ಲಿ ಒಮ್ಮೆ ಒಂದು ಕಡೆ ಅಸ್ತಿತ್ವದಲ್ಲಿರುವ ಕೊಳಚೆ ಪ್ರದೇಶವು ಆ ಸ್ಥಳದಿಂದ ಸ್ಥಳಾಂತರಿಸಲ್ಪಡಬಹುದಾದ ಸಾಧ್ಯತೆ ಇರುತ್ತದೆ. ಆ ಸ್ಥಳದಲ್ಲಿ ಬೇರೊಂದು ನೆಲೆ ಅಸ್ತಿತ್ವಕ್ಕೆ ಬಂದಿರಬಹುದಾದ ಸಂಭವವಿರುತ್ತದೆ. ಇದು ಕೊಳಚೆ ಪ್ರದೇಶಗಳ ನಿರ್ಮೂಲನ ಕಾರ್ಯಗಳ ವತಿಯಿಂದ ಹೆಚ್ಚು ವ್ಯಾಪಕವಾಗಿ ತುರ್ತಾಗಿ, ಗಣನೀಯ ಪ್ರಮಾಣದಲ್ಲಿ ಆಗಬಹುದಾಗಿರುತ್ತದೆ.

## 9. ಸಂಚರಣೆ :

ಕೊಳಚೆ ಪ್ರದೇಶಗಳಲ್ಲಿ ಸಾಮಾಜಿಕ ಸಂಚರಣೆ ವೈಶಿಷ್ಟಪೂರ್ಣವಾಗಿರುತ್ತದೆ. ಅದು ಬಹಳ ಮಟ್ಟಿಗೆ ಗಣನೀಯ ಪ್ರಮಾಣದಲ್ಲಿ ಕಂಡುಬರುತ್ತದೆ. ಅದು ಒಂದು ಕೊಳಚೆ ಪ್ರದೇಶದಿಂದ ಮತ್ತೊಂದು ಕೊಳಚೆ ಪ್ರದೇಶಕ್ಕೆ ಒಂದು ನಗರದ ಕೊಳಚೆ ಪ್ರದೇಶದಿಂದ ಮತ್ತೊಂದು ನಗರದ ಕೊಳಚೆ ಪ್ರದೇಶಕ್ಕೆ, ಒಂದು ರಾಷ್ಟ್ರದ ಕೊಳಚೆ ಪ್ರದೇಶದಿಂದ ಮತ್ತೊಂದು ರಾಷ್ಟ್ರದ ಕೊಳಚೆ ಪ್ರದೇಶಕ್ಕೆ ಭಿನ್ನವಾಗಿರಬಹುದಾದ ಸಾಧ್ಯತೆಗಳಿರುತ್ತವೆ. ಒಂದರಲ್ಲಿ ಒಂದು ಅಂಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಂಚರಣೆ ಗೋಚರಿಸಬಹುದಾಗಿರುತ್ತದೆ. ಅದು ಒಳ ಹಾಗೂ ಹೊರ ನೋಟಗಳಿಂದ ವ್ಯಕ್ತವಾಗಬಹುದಾಗಿರುತ್ತದೆ.

## 1.6 ಕೊಳಚೆ ಪ್ರದೇಶಗಳ ಅಸ್ತಿತ್ವಕ್ಕೆ / ಉದ್ಭವಕ್ಕೆ ಕಾರಣಗಳು :

ಕೊಳಚೆ ಪ್ರದೇಶಗಳು ಆಧುನಿಕ ನಗರಗಳ ಸಾಮಾನ್ಯ ಲಕ್ಷಣವಾಗಿದೆ. ಸಮಾಜಶಾಸ್ತ್ರಜ್ಞರು ಕೊಳಚೆ ಪ್ರದೇಶಗಳ ಬೆಳವಣಿಗೆಗೆ ಅನೇಕ ಕಾರಣಗಳನ್ನು

ನೀಡಿದ್ದಾರೆ. ಕೈಗಾರಿಕೀಕರಣ, ತೀವ್ರ ನಗರೀಕರಣ, ಅತಿಯಾದ ಜನಸಂಖ್ಯೆ, ವಲಸೆ, ಬಡತನ, ದುಬಾರಿ ವಸತಿ ಸೌಲಭ್ಯ, ಉದ್ಯೋಗಾಕಾಂಕ್ಷಿಗಳು, ಅನಿಯಂತ್ರಿತ ಕೊಳಚೆ ವಾಸಿಗಳ ನಿರ್ಲಕ್ಷ್ಯ ಯೋಜಕರ ಮತ್ತು ಸ್ಥಳೀಯ ಸಂಸ್ಥೆಗಳ ಉದಾಸೀನತೆ, ದುಬಾರಿ ನೆಲೆ ಮತ್ತು ಮನೆಬಾಡಿಗೆ, ವಸತಿ ಸೌಕರ್ಯದ ಕೊರತೆ ಇನ್ನೂ ಮುಂತಾದ ಕಾರಣಗಳು ಈ ಕೆಳಗಿನಂತೆ ವಿವರಿಸಲಾಗಿದೆ.

**1. ಬಡತನ :**

ಕೊಳಚೆ ಪ್ರದೇಶಗಳ ಅಸ್ತಿತ್ವಕ್ಕೆ ಭಾರತದಲ್ಲಿ ಅತಿ ವ್ಯಾಪಕವಾಗಿರುವ ಬಡತನ ಒಂದು ಪ್ರಮುಖ ಕಾರಣ. ದಟ್ಟ ದರಿದ್ರತನ, ನಿರುದ್ಯೋಗ ಮತ್ತು ಉದ್ಯೋಗವಿದ್ದೆಡೆ ಅತ್ಯಂತ ಕಡಿಮೆ ಆದಾಯದ ಪರಿಸ್ಥಿತಿಯಿಂದಾಗಿ ಜೀವಂತವಾಗಿರಲು ಬಾಳಿನೊಡನೆ, ನಿರಂತರ ಹೋರಾಟವನ್ನೆ ನಡೆಸಿರುವವರ ಸಂಖ್ಯೆ ಹೆಚ್ಚಾಗಿದೆ. ಮಾನವನ ಪ್ರಮುಖ ಅವಶ್ಯಕತೆಗಳಾದ ಅನ್ನ, ಬಟ್ಟೆ ಮತ್ತು ವಸತಿ, ಇವುಗಳ ಪೂರೈಕೆಯಲ್ಲಿ ಅಸಂಖ್ಯಾತ ಜನರ ವರಮಾನ ಮೊದಲ ಅವಶ್ಯಕತೆಯಾದ ಅನ್ನಕ್ಕೆ ಸಾಲದೆನ್ನುವಾಗ ವಸತಿಯು ಸೌಲಭ್ಯವನ್ನು ನಂತರವೇ ಪರಿಗಣಿಸಬೇಕಾಗುತ್ತದೆ. ಸಹಜವಾಗಿಯೇ ಕನಿಷ್ಠ ವರಮಾನದ ವ್ಯಕ್ತಿಗಳು ಅತ್ಯಂತ ಕಡಿಮೆ ಬೆಲೆಯಲ್ಲಿ ಸಿಗಬಹುದಾದ ನಿವೇಶನ ಮತ್ತು ವಸತಿಗಳಲ್ಲಿ ವಾಸಿಸಲು ಪ್ರಾರಂಭಿಸುತ್ತಾರೆ.

ಅಂತೆಯೆ ಕೊಳಚೆ ಪ್ರದೇಶಗಳಲ್ಲಿ ವಾಸಿಸಲು ಬಹುತೇಕ ಜನರಲ್ಲಿ ದೇಹವನ್ನು ದಣಿಸಿ ದುಡಿಯುವ ವೃತ್ತಿಗಳಲ್ಲಿ ತೊಡಗಿರುವ ಮತ್ತು ಅತ್ಯಂತ ಕನಿಷ್ಠ ವರಮಾನವನ್ನು ಹೊಂದಿರುವವರೇ ಹೆಚ್ಚು. ಅವರ ಅಲ್ಪ ಆದಾಯ ಅವರ ಹೊಟ್ಟೆ

ತುಂಬಿಸಿಕೊಳ್ಳುವುದರಲ್ಲೆ ಮುಗಿದು ಹೋಗುವ ಕಾರಣ ಈ ಜನರು ವಸತಿಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲಾರರು. ಹೀಗಾಗಿ, ಕೊಳಚೆ ಪ್ರದೇಶವೆಂದು ಕರೆಯಲಾಗುವ ಅತಿ ಕನಿಷ್ಠ ಮಟ್ಟದ ವಸತಿ ಸ್ಥಳಗಳಲ್ಲಿ ಜೀವಿಸಲು ಪ್ರಾರಂಭಿಸುತ್ತಾರೆ.

**2. ಜನಸಂಖ್ಯಾ ಹೆಚ್ಚಳ :**

ನಗರಗಳಲ್ಲಿ ಜನಸಂಖ್ಯೆ ಹೆಚ್ಚು ಅನ್ನುವುದಕ್ಕಿಂತ ಹೆಚ್ಚುತ್ತಿದೆ ಎನ್ನುವುದು ಹೆಚ್ಚು ಸೂಕ್ತ ಜನನ ದರ ಮತ್ತು ಜನಸಂಖ್ಯಾ ಹೆಚ್ಚಳ ನಗರಗಳಿಗಿಂತ ಗ್ರಾಮಗಳಲ್ಲಿ ಹೆಚ್ಚಿದ್ದರು ನಗರಾಭಿಮುಖ ವಲಸೆಯಿಂದ ನಗರಗಳ ಜನಸಂಖ್ಯೆ ಹೆಚ್ಚುತ್ತಿದೆ.

**3. ಕೈಗಾರಿಕೀಕರಣ :**

ಕೈಗಾರಿಕೀಕರಣ ಹೆಚ್ಚಿದ ಹಾಗೆ ನಗರೀಕರಣವು ತೀವ್ರಗೊಂಡಿದೆ. ನಗರಗಳಲ್ಲಿ ಕಾರ್ಖಾನೆಗಳು ಸ್ಥಾಪನೆಯಾಗುತ್ತಲಿರುವುದರಿಂದ ಕಾರ್ಮಿಕರ ಬೇಡಿಕೆ ಹೆಚ್ಚುತ್ತಿದೆ. ನಗರಗಳಲ್ಲಿ ಕಾರ್ಮಿಕರ ಸರಬರಾಜು ಕಡಿಮೆಯಿರುವುದರಿಂದ ಗ್ರಾಮೀಣ ಪ್ರದೇಶಗಳಿಂದ ಜನರು ನಗರಗಳಿಗೆ ವಲಸೆ ಬರತೊಡಗಿದ್ದಾರೆ. ಇಂತಹ ಸಾವಿರಾರು ಕಾರ್ಮಿಕರು ಕಡಿಮೆ ಆದಾಯದಲ್ಲಿ ಸ್ವಂತ ವಸತಿ ಪಡೆಯುವುದು ಕನಸು. ಕೈಗಾರಿಕೆ ಮಾಲಿಕರು ಕಾರ್ಮಿಕರಿಗೆ ವಸತಿ ಸೌಲಭ್ಯವನ್ನು ಒದಗಿಸುವುದು ತೀರ ಕಡಿಮೆ. ಇಂತಹ ಕಾರ್ಮಿಕರು, ಕೂಲಿಗಾರರು, ಬಡವರು ಅನಿವಾರ್ಯವಾಗಿ ಜೋಪಡಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸಲೇಬೇಕಾಗುತ್ತದೆ. ಇಂತಹ ಗುಡಿಸಲುಗಳ ಸಂಕೀರ್ಣಗಳು ಕೊಳಚೆ ಪ್ರದೇಶಗಳಾಗುತ್ತವೆ.

**4. ದುಬಾರಿ ನೆಲ ಮತ್ತು ಮನೆ ಬಾಡಿಗೆ :**

ಈಗಾಗಲೇ ಹೇಳಿರುವ ಹಾಗೆ ನಗರಗಳ ಜನಸಂಖ್ಯೆ ಅಪರಿಮಿತವಾಗಿದ್ದು ಜನರು ಅತಿಯಾದರೂ ಜೀವಿಸಲು ಒಂದು ನೆಲೆ ಬೇಕಿಲ್ಲ. ವಸತಿಯು ಮಾನವನ ಮೂಲಭೂತ ಸೌಲಭ್ಯಗಳಲ್ಲೊಂದು. ನಗರದ ಕಡುಬಡವರು, ಕಡಿಮೆ ಆದಾಯದವರು, ಕಾರ್ಮಿಕರು, ಕೂಲಿಗಾರರು ಸ್ವಂತ ಮನೆ ಅಥವಾ ಬಾಡಿಗೆ ಮನೆಗಳಲ್ಲಿ ವಾಸಿಸಲು ಸಾಧ್ಯವಿಲ್ಲ. ಕಾರಣ ನಗರಗಳ ನೆಲ, ನಿವೇಶನದ ದರ ಹಾಗೂ ಮನೆ ಬಾಡಿಗೆ ಅತಿ ದುಬಾರಿ.

ಈ ಪರಿಸ್ಥಿತಿಯಲ್ಲಿ ಈ ಮೇಲೆ ಕಾಣಿಸಿದ ವರ್ಗಗಳ ಜನರು ನಿವೇಶನಕೊಳ್ಳುವುದು ಅಥವಾ ಮನೆ ಕಟ್ಟಿಕೊಳ್ಳುವುದು ಅಥವಾ ಬಾಡಿಗೆಗೆ ಮನೆ ಪಡೆಯುವುದು ಗಗನ ಕುಸುಮ. ಅವರು ಜೀವಿಸಲು ಒಂದು ನೆಲೆ ಬೇಕಾದ್ದರಿಂದ ಅನಿವಾರ್ಯವಾಗಿ ಅನಧಿಕೃತ ಗುಡಿಸಲುಗಳನ್ನು ಕಟ್ಟಿಕೊಂಡು ಕೊಳಚೆ ಪ್ರದೇಶಗಳನ್ನು ನಿರ್ಮಿಸುತ್ತಾರೆ.

**5. ವಲಸೆ :**

ಭಾರತದಲ್ಲಿ ಗ್ರಾಮೀಣ ಪ್ರದೇಶಗಳಿಂದ ಜನರು ನಗರಗಳಿಗೆ ತಂಡೋಪತಂಡವಾಗಿ ವಲಸೆ ಬರುತ್ತಿದ್ದಾರೆ. ಕಾರ್ಖಾನೆಗಳು ಗ್ರಾಮಾಂತರದ ನಿರುದ್ಯೋಗಿಗಳ ಕಣ್ಣಿಗೆ ಆಸೆಯ ಹೊಂಗಿರಣ. ಪಟ್ಟಣ, ನಗರಗಳು ಉದ್ಯೋಗಾರ್ಥಿಗಳ ಸ್ವರ್ಗ.

ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಮತ್ತು ಬಡತನದಿಂದಾಗಿ ವಲಸೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಹೀಗೆ ವಲಸೆ ಬರುವವರಲ್ಲಿ ಅವಿದ್ಯಾವಂತರೆ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಇಂತಹವರಿಗೆ ಸಿಗುವ ಉದ್ಯೋಗಗಳು ಸಾಮಾನ್ಯವಾಗಿ ಕಡಿಮೆ ಆದಾಯವನ್ನು ಕೊಡುವಂತಹವು. ಅಂತೆಯೇ ಈ ಜನರು ಕೊಳಚೆ ಪ್ರದೇಶಗಳು ವೃದ್ಧಿಯಾಗಲು ಬಹಳ ಮಟ್ಟಿಗೆ ಕಾರಣವೆನಿಸುತ್ತಾರೆ.

**6. ನಗರೀಕರಣ :**

ಕೈಗಾರಿಕೀಕರಣದಿಂದಾಗಿ ನೂರಾರು ಕಾರ್ಖಾನೆಗಳ ಸ್ಥಾಪನೆ, ಶೈಕ್ಷಣಿಕ, ಮನರಂಜನೆ, ವಾಣಿಜ್ಯ, ಸಾರಿಗೆ ಸಂಪರ್ಕ, ನಿರ್ಮಾಣ ಚಟುವಟಿಗಳ ಕೇಂದ್ರೀಕರಣದಿಂದ ನಗರಗಳು ಬೆಳೆಯುತ್ತವೆ. ಭಾರತದಲ್ಲಿ 1951 ರಲ್ಲಿದ್ದ 81 ನಗರಗಳ ಸಂಖ್ಯೆ 1991 ರ ವೇಳೆಗೆ 229 ಕ್ಕೇರಿದೆ. ನಗರಗಳಿಗೆ ಪ್ರಸ್ತುತ ನಗರಗಳಲ್ಲಿರುವ ಜನಸಂಖ್ಯೆಯಲ್ಲದೆ ಗ್ರಾಮಗಳಿಂದ ವಲಸೆ ಬರುವ ಲಕ್ಷಾಂತರ ಜನರು ಸೇರಿ ನಗರಗಳಲ್ಲಿ ಜನಸಂದಣಿ ಏರ್ಪಟ್ಟಿದೆ. ನಗರಗಳಿಗೆ ಸೇರುವ ಜನರಿಗೆಲ್ಲ ವಸತಿ ಸೌಲಭ್ಯವನ್ನು ಒದಗಿಸಲಾಗುವುದಿಲ್ಲ. ನಗರಗಳಲ್ಲಿರುವ ಬಡವರು, ಕೂಲಿಕಾರ್ಮಿಕರು ವಾಸಿಸಲು ಗುಡಿಸಲುಗಳನ್ನು ಕಟ್ಟಿ ಕೊಳಚೆ ಪ್ರದೇಶಗಳನ್ನು ಸೃಷ್ಟಿಸುತ್ತಾರೆ.

**7. ಕೊಳಚೆ ನಿವಾಸಿಗಳು :**

ಕೊಳಚೆ ಪ್ರದೇಶಗಳ ನಿರ್ಮಾಣಕ್ಕೆ ಅಲ್ಲಿನ ನಿವಾಸಿಗಳೇ ಕಾರಣ, ಮೊದಲನೆಯದಾಗಿ ಕೊಳಚೆ ನಿವಾಸಿಗಳು ಚಿಕ್ಕ ಗುಡಿಸಲುಗಳಾದರೂ ಚೊಕ್ಕಟ ಜೀವನವನ್ನು ನಡೆಸಲು ಬಯಸುವುದಿಲ್ಲ. ಅವರು ಕೊಳಕು ಮನೋಧರ್ಮದವರಾಗಿ

ಆರೋಗ್ಯ ಮತ್ತು ನೈರ್ಮಲ್ಯ ಪ್ರಜ್ಞೆ ಹೊಂದಿದರವಾಗಿರುವುದಿಲ್ಲ. ಮನಸ್ಸು ಮಾಡಿದರೆ ಅವರು ಗುಡಿಸಲುಗಳಲ್ಲೇ ಉತ್ತಮ ಜೀವನ ನಡೆಸಬಹುದು. ಎರಡನೆಯದಾಗಿ ಸರ್ಕಾರ ಮತ್ತು ಸ್ಥಳಿಯ ಸಂಸ್ಥೆಗಳು ಕೊಳಚೆ ನಿವಾಸಿಗಳಿಗೆ ವಸತಿ ಸೌಲಭ್ಯ ಒದಗಿಸಿದರೂ ಅಲ್ಲಿ ವಾಸಿಸಲು ಹಿಂಜರಿದು ಕೊಳಚೆ ಪ್ರದೇಶಗಳಲ್ಲೆ ವಾಸಿಸಲು ಪಟ್ಟು ಹಿಡಿಯುತ್ತಾರೆ. ಕೊಳಚೆ ನಿವಾಸಿಗಳಲ್ಲಿ ಪೌರ ಪ್ರಜ್ಞೆ ಕಡಿಮೆ. ಅವರನ್ನು ಹೊಸ ವಸತಿಗಳಿಗೆ ಕಳುಹಿಸಿದರೂ ಆ ವಸತಿಗಳನ್ನೆ ಕೊಳಚೆ ಪ್ರದೇಶಗಳಾನ್ನಾಗಿಸುತ್ತಾರೆ.

**8. ಇತರೆ ಕಾರಣಗಳು :**

ಕೊಳಚೆ ಪ್ರದೇಶಗಳ ಅಸ್ಥಿತ್ವಕ್ಕೆ ಈ ಮೇಲಿನ ಕಾರಣಗಳಲ್ಲದೆ ಶುಚಿತ್ವ ಮತ್ತು ನೈರ್ಮಲ್ಯದ ಬಗ್ಗೆ ಸಾರ್ವಜನಿಕ ನಿರ್ಲಕ್ಷ್ಯ, ಪುರಸಭೆ, ನಗರಸಭೆ ಮತ್ತು ನಗರಪಾಲಿಕೆಗಳ ಉದಾಸೀನತೆ, ಮನೆಗಳ ನಿರ್ಮಾಣ ವೆಚ್ಚದ ಹೆಚ್ಚಳ, ನಿವೇಶನದ ಕೊರತೆ, ಕಾರ್ಮಿಕರಿಗೆ ಮಾಲೀಕರು ವಸತಿ ಸೌಲಭ್ಯ ಒದಗಿಸದಿರುವಿಕೆ, ಪರ್ಯಾಯ ವಸತಿ ಏರ್ಪಾಡಿಲ್ಲದಿರುವುದು, ಖಾಸಗಿ ಗೃಹ ನಿರ್ಮಾಣ ವ್ಯವಸ್ಥೆಯ ಕೊರತೆ, ಲಂಚಗುಳಿತನ ಮುಂತಾದವು ಕಾರಣ.

## 1.7 ಕೊಳಚೆ ಪ್ರದೇಶಗಳ ದುಷ್ಪರಿಣಾಮಗಳು :

ಕೊಳಚೆ ಪ್ರದೇಶಗಳು ಸಾರ್ವಜನಿಕ ಕ್ಷೇಮಕ್ಕೆ ಧಕ್ಕೆಯನ್ನುಂಟುಮಾಡುತ್ತವೆ ಎನ್ನುವುದು ಒಪ್ಪಿತವಾದಂತಹ ಅಂಶ. ಇದಕ್ಕೂ ಹೆಚ್ಚಿನದಾಗಿ ಕೊಳಚೆ ಪ್ರದೇಶದ ಕಲುಷಿತ ವಾತಾವರಣಕ್ಕೆ ಅಲ್ಲಿನ ನಿವಾಸಿಗಳೆ ಪ್ರಥಮ ಬಲಿಯೆನಿಸುತ್ತಾರೆ. ಕೊಳಚೆ

ಪ್ರದೇಶದ ಜೀವನ ಮತ್ತು ಅಲ್ಲಿನ ವಾತಾವರಣ, ಅಲ್ಲಿ ವಾಸಿಸುವ ಜನರ ಸಾಮಾಜಿಕ, ಮಾನಸಿಕ ಮತ್ತು ಜೈವಿಕ ಮಟ್ಟಗಳ ಮೇಲೆ ಅತಿ ಹೆಚ್ಚಿನ ಪ್ರಭಾವವನ್ನು ಬೀರುತ್ತವೆ.

ಕೈಗಾರಿಕೀಕರಣ ಹಾಗೂ ನಗರೀಕರಣಗಳ ಅತಿರೇಕತೆ ಮತ್ತು ಅನಿಯಂತ್ರಿತತೆಗಳ ಪರಿಣಾಮವಾಗಿ ಹುಟ್ಟಿಕೊಂಡಿರುವ ಕೊಳಚೆ ಪ್ರದೇಶಗಳು ಹಲವಾರು ಬಗೆಯ ಸಾಮಾಜಿಕ ಸವಾಲುಗಳಿಗೆ ಹಾಗೂ ದುಷ್ಪರಿಣಾಮಗಳಿಗೆ ಕಾರಣವಾಗಿವೆ. ನಗರ ಜೀವನದ ನೆಮ್ಮದಿಗೆ ಆತಂಕಕಾರಿಯಾಗಿರುವ ಈ ಕೊಳಚೆ ಪ್ರದೇಶಗಳು ತಂದೊಡ್ಡಿರುವ ಸವಾಲುಗಳ ಹಾಗೂ ಹಾನಿಕಾರಕ ಪರಿಣಾಮಗಳ ಸೂಕ್ಷ್ಮ ಅವಲೋಕನ ಇಲ್ಲಿದೆ.

**1. ಆರೋಗ್ಯ ಸೌಕರ್ಯಗಳ ಕೊರತೆಯಿಂದಾಗಿ ರೋಗಗಳ ಹರಡುವಿಕೆ :**

ಕೊಳಚೆ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಜನರುಗಳು ತೀರಾ ಅಗತ್ಯವಾದ ಆರೋಗ್ಯ ಹಾಗೂ ನೈರ್ಮಲ್ಯದ ಸಾಧನಗಳಿಂದ ವಂಚಿತರಾಗಿದ್ದಾರೆ. ಹೊಟ್ಟೆ ತುಂಬುವಷ್ಟು ಹಾಗೂ ಪೋಷಕಾಂಶಗಳಿಂದ ಕೂಡಿದ ಆಹಾರ ಅವರಿಗೆ ಲಭಿಸುತ್ತಿಲ್ಲ. ವಾಂತಿ, ಭೇದಿ, ಜ್ವರ, ವಿಷಮಶೀತ ಜ್ವರ, ರಕ್ತಹೀನತೆಗಳಂತಹ ಸಾಮಾನ್ಯ ರೋಗಗಳಲ್ಲದೆ ಅಸ್ತಮಾ, ಕ್ಷಯ, ಕ್ಯಾನ್ಸರ್, ಹಳದಿರೋಗ [ಜಾಂಡೀಸ್], ಚರ್ಮರೋಗ, ರತಿರೋಗ, ಏಯ್ಡ್ಸ್‌ಗಳಂತಹ ಭೀಕರ ವ್ಯಾಧಿಗಳು ಕೂಡ ಕೊಳಚೆ ನಿವಾಸಿಗಳನ್ನು ಬಾಧಿಸುತ್ತಿವೆ. ಇಂತಹ ರೋಗಗಳು ಬಂದಾಗ ಅವುಗಳಿಂದ ಮುಕ್ತಿ ಪಡೆಯಲು ಸರಿಯಾದ ವೈದ್ಯಕಿಯ ಚಿಕಿತ್ಸೆಗಳನ್ನು ಪಡೆದುಕೊಳ್ಳುವ ಆರ್ಥಿಕ ಸಾಮರ್ಥ್ಯ ಅವರಿಗಿಲ್ಲ. ಮುಂದೆ ಹುಟ್ಟಲಿರುವ ಮಕ್ಕಳ ಮೇಲೂ ಕೆಲವು ರೋಗಗಳು

ದುಷ್ಪರಿಣಾಮಗಳನ್ನು ಬೀರಲಿವೆ. ಅಂತಯೇ, ಇಲ್ಲಿ ಚಿಕ್ಕ ಮಕ್ಕಳು ಮತ್ತು ತಾಯಿಂದಿರು ಉಳಿದೆಡೆಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮರಣ ಹೊಂದುತ್ತಿದ್ದಾರೆ.

**2. ಅನೈತಿಕ ವ್ಯವಹಾರ :**

ಸಾಮಾನ್ಯವಾಗಿ ಕೊಳಚೆ ಪ್ರದೇಶಗಳಲ್ಲಿ ನೈತಿಕ ನಿಯಮಗಳಿಗೆ ಮನ್ನಣೆ ಕಡಿಮೆ. ಸಭ್ಯ ಸಮಾಜದ ಶಿಸ್ತು, ನಿಯಮ, ಶಿಷ್ಟಾಚಾರಗಳಿಗೆ ಪುರಸ್ಕಾರವಿರುವುದಿಲ್ಲ. ತುಚ್ಛ ರೀತಿಯ ಮಾತುಕತೆ, ಅಶ್ಲೀಲ ಪದಗಳ ಬಳಕೆ, ಇಲ್ಲಿ ಸಾಮಾನ್ಯವೆನಿಸುವಂತಹವು. ಸಭ್ಯ ಜೀವನದ ಬಗೆಗೆ ಗಮನವಿಲ್ಲದ ಪ್ರಯುಕ್ತ, ಇಂತಹ ಕೆಳದರ್ಜೆಯ ಮಾತುಕತೆ ಸ್ವಾಬಾವಿಕವೆನಿಸಿದೆ. ಅಶ್ಲೀಲ ಮಾತುಗಳನ್ನು ಆಡಬಾರದು ಎನ್ನುವ ಪ್ರಜ್ಞೆಯಾಗಲೀ ಮತ್ತು ಅಂತಹ ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಯಾವುದೇ ಸಂಯಮವಾಗಲೀ ಕಂಡುಬರುವುದಿಲ್ಲ. ಸುಳ್ಳು, ವಂಚನೆ ಅಷ್ಟೇ ಸಾಮಾನ್ಯವೆನಿಸುವಂತಹವು. ಅಲ್ಲಿನ ಬಡತನ, ಅನೈತಿಕ ವ್ಯವಹಾರದ ಮತ್ತೊಂದು ತುದಿಯೆ ಎನಿಸುವ ವ್ಯಭಿಚಾರಕ್ಕೂ ಪ್ರೋತ್ಸಾಹವೀಯುತ್ತದೆ. ಮೂಲತಃ ಆರ್ಥಿಕ ದುಃಸ್ಥಿತಿ ಇಲ್ಲಿನ ಜನರನ್ನು ಇಂತಹ ವ್ಯವಹಾರಕ್ಕೆ ಪ್ರೇರೇಪಿಸುತ್ತದೆ.

**3. ಕಾನೂನು ವಿರೋಧಿ ಚಟುವಟಿಕೆಗಳ ಪ್ರೋತ್ಸಾಹ :**

ಕೊಳಚೆ ಪ್ರದೇಶಗಳಲ್ಲಿ ವಾಸಮಾಡುವ ಮಂದಿ ಸಾಮಾಜಿಕ ನಿಯಮಗಳ ಬಗ್ಗೆ ಅಷ್ಟಾಗಿ ಗೌರವ ಹೊಂದಿರುವುದಿಲ್ಲ. ಗೌರವ ಹೊಂದಿರುವವರಲ್ಲ. ಸಾಮಾಜಿಕವಾಗಿ ಕೆಳ ಅಂತಸ್ತಿನಲ್ಲಿರುವ ಇವರು ಕೀಳರಿಮೆ ಹೊಂದಿದವರುಗಳಾಗಿರುವುದರಿಂದ ತಮ್ಮ ಸ್ವಂತಹ ಗೌರವ, ಪ್ರತಿಷ್ಠೆ, ಮನೆತನದ ಹಿರಿಮೆ ಮುಂತಾದುವುಗಳ ಬಗ್ಗೆ ಚಿಂತಿಸದೆ ತಮ್ಮ

ಸ್ವಾರ್ಥ ಸಾಧನೆಯಲ್ಲಿ ಮಾತ್ರ ಮುಳುಗಿರುತ್ತಾರೆ. ಆದ್ದರಿಂದ ಸಾಮಾಜಿಕ ಅಪವರ್ತನೆಯಲ್ಲಿ ತೊಡಗುವ ಪ್ರವೃತ್ತಿ ಇವರಲ್ಲಿ ಬಲವಾಗಿರುತ್ತದೆ.

ಹಲವು ಕಡೆಗಳಲ್ಲಿ ಮಾಡಲಾಗಿರುವ ಅಧ್ಯಯನಗಳು ಸೂಚಿಸುವಂತೆ ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರು ಸಾಪೇಕ್ಷ ಹೆಚ್ಚು ಅಪರಾಧ ಮಾಡುವವರಾಗಿದ್ದಾರೆ. ಕಳ್ಳತನ, ಜೇಬುಗಳ್ಳತನ, ಸುಲಿಗೆ, ಜೂಜುಗಾರಿಕೆ, ಕೊಲೆ, ದರೊಡೆ, ಹಿಂಸಾಚಾರ, ಲೈಂಗಿಕ ದುರಾಚಾರ, ಬಹಿಷ್ಕೃತ ವಸ್ತುಗಳ ಕಳ್ಳ ಸಾಗಣಿಕೆ ಇವೇ ಮುಂತಾದ ಬಗೆಯ ಸಮಾಜ ವಿರೋಧಿ ಕೃತ್ಯಗಳಲ್ಲಿ ಇಲ್ಲಿನ ಜನರು ಗಣನೀಯ ಸಂಖ್ಯೆಯಲ್ಲಿ ತೋಡಗಿರುತ್ತಾರೆಂಬುದನ್ನು ಈ ಅಧ್ಯಯನಗಳು ತೋರಿಸಿಕೊಟ್ಟಿವೆ. ಮಾತ್ರವಲ್ಲದೆ, ಬೇರೆ ಕಡೆಗಳಲ್ಲಿ ಗಂಭೀರ ಅಪರಾಧಗಳನ್ನು ಮಾಡಿದ ಜನ ಕೂಡ ತಲೆತಪ್ಪಿಸಿಕೊಳ್ಳಲು ಕೊಳಚೆ ಪ್ರದೇಶಗಳಿಗೆ ಬಂದು ಕೆಲಕಾಲ ರಕ್ಷಣೆ ಪಡೆಯುವುದೂ ಇದೆ.

**4. ಸಾಮಾಜಿಕ ಪಿಡುಗುಗಳ ನೆಲೆ :**

ಕೊಳಚೆ ಪ್ರದೇಶಗಳನ್ನು ಅನೈತಿಕ ವ್ಯವಹಾರಗಳ ನೆಲೆಬೀಡುಗಳೆಂದು ಕರೆಯುವುದಿದೆ. ಸಮಾಜದ ನೀತಿ–ನಿಯಮಗಳಿಗೆ, ರೀತಿ–ರಿವಾಜುಗಳಿಗೆ, ಶಿಸ್ತು–ಸಭ್ಯತೆ–ಶಿಷ್ಟಾಚಾರಗಳಿಗೆ ಇಲ್ಲಿ ವಾಸಮಾಡುವ ಮಂದಿ ವಿಶೇಷ ಗೌರವ ನೀಡುವವರಲ್ಲ. ಇಲ್ಲಿನ ನಿವಾಸಿಗಳಿಗೆ ಅವರು ಎಳೆಯರಾಗಿರುವಾಗ ಸರಿಯಾದ ಸಾಮಾಜಿಕ ಶಿಕ್ಷಣವು ಲಭಿಸಿರದೆ ಇರುವುದರಿಂದ ಮತ್ತು ಅವರ ಆರ್ಥಿಕ ದುರವಸ್ಥೆ ಅವರನ್ನು ಎಂತಹ ಹೇಯ ಕೃತ್ಯಗಳಿಗೂ ಪ್ರೋತ್ಸಾಹ ನೀಡುವಂತಹದಾಗಿರುವುದರಿಂದ ಹಾಗೂ ವಿಸ್ತೃತ

ಸಮಾಜದ ಮೌಲ್ಯಗಳಿಗೆ ಜೀವನದ ರೀತಿಯ ಬಗ್ಗೆ ಈ ನಿವಾಸಿಗಳಿಗೆ ಗೌರವವಿಲ್ಲದೇ ಇರುವುದರಿಂದ–ಅವರು ಸಮಾಜ ವಿರೋಧಿ ಕೃತ್ಯಗಳಿಗೆ ಹೇಸುವುದಿಲ್ಲ.

ಇದೇ ಕಾರಣಕ್ಕಾಗಿ ಅವರು ಸಾಮಾಜಿಕ ಪಿಡುಗುಗಳೆಂದು ಕರೆಯಲಾಗುತ್ತಿರುವ – ಮಧ್ಯಪಾನ, ಮಾದಕವಸ್ತುವಿನ ವ್ಯಸನ, ಜೂಜುಗಾರಿಕೆ, ವ್ಯಭಿಚಾರ, ಮಾದಕವಸ್ತುಗಳ ಕಳ್ಳಸಾಗಣಿಕೆ ಹಾಗೂ ಇನ್ನಿತರ ನಿಷೇದಿತ ವಸ್ತುಗಳು, ಭಯೋತ್ಪಾದಕ ಚಟುವಟಿಕೆ, ಸಂಘಟಿತ ಭಿಕ್ಷಾಟನೆ, ಸಂಘಟಿತ ಕಳ್ಳತನ ಹಾಗೂ ಅಪರಾಧ ಮುಂತಾದವುಗಳಲ್ಲಿ ತಾವೇ ಸ್ವತಃ ತೊಡಗಿರುತ್ತಾರೆ ಅಥವಾ ಅವುಗಳಿಗೆ ಪ್ರತ್ಯಕ್ಷ ಅಥವಾ ಪರೋಕ್ಷ ಬೆಂಬಲ ನೀಡುತ್ತಾ ಬಂದಿರುತ್ತಾರೆ.

**5. ಎಳೆಯ ಮಕ್ಕಳ ಮನಸ್ಸಿನ ಮೇಲಾಗುವ ದುಷ್ಪರಿಣಾಮಗಳು :**

ಕೊಳಚೆ ಪ್ರದೇಶಗಳಲ್ಲಿ ಕಾಣಬರುವ ಕೌಟುಂಬಿಕ, ಸಾಮಾಜಿಕ ಹಾಗೂ ಭೌತಿಕ ಅನೈರ್ಮಲ್ಯಯುಕ್ತವಾದ ವಾತಾವರಣವು ಅಲ್ಲಿನ ಮಕ್ಕಳ ಮಾನಸಿಕತೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡುವುದು. ತಮ್ಮ ಕಣ್ಣೆದುರು ತಮ್ಮ ಹಿರಿಯರೇ ಅಪರಾಧ, ಕಳ್ಳತನ, ಹಿಂಸಾಚಾರ, ಅನೈತಿಕ ಲೈಂಗಿಕತೆಗಳಲ್ಲಿ ಮುಳುಗಿರುವುದನ್ನು ನೋಡಿದ ಚಿಕ್ಕ ಮಕ್ಕಳು ತಾವು ಕೂಡ ಅಂತಹ "ಸಾಹಸ"ಕ್ಕೆ ಕೈಹಾಕಲು ತೊಡಗುವ ಸಾಧ್ಯತೆಯಿದೆ. ಕಿರಿಯರು ಮಾಡಬಹುದಾದ ತಪ್ಪುಗಳನ್ನು ತಿದ್ದುವ, ಅವರು ತೋರ್ಪಡಿಸುವ ಸಮಾಜ ವಿರೋಧೀ ಕಾರ್ಯವನ್ನು ಹತ್ತಿಕ್ಕುವ ಯಾವುದೇ ಪ್ರಯತ್ನವನ್ನು ಅವರ ಹಿರಿಯರು ಮಾಡುವುದಿಲ್ಲ. ಬದಲಾಗಿ, ತಮ್ಮ ಮಕ್ಕಳ ಅನೈತಿಕ ನಡತೆಯಿಂದ ತಮಗೆ ಆರ್ಥಿಕ / ಭೌತಿಕ ಲಾಭವಾಗುವುದಿದ್ದರೆ ಅವರು ಅದಕ್ಕೆ ಬೆಂಬಲ ಕೊಡಲು ಕೂಡಾ ಸಿದ್ಧ.

## 1.8 ಅಧ್ಯಯನದ ಸಮಸ್ಯೆಗಳು :

ಭಾರತದಲ್ಲಿನ ಕೊಳಚೆ ಪ್ರದೇಶಗಳ ವಾಸ್ತವ ಸ್ಥಿತಿಯ ಚಿತ್ರಣ ಅವಶ್ಯವೆನಿಸುತ್ತದೆ. ನಗರಗಳ ಅನಿಯೋಜಿತ ಬೆಳವಣಿಗೆ, ಗ್ರಾಮಾಂತರ ಪ್ರದೇಶಗಳಿಂದ ನಗರಗಳಿಗೆ ವಲಸೆ ಬರುವವರ ದಿನೇ ದಿನೇ ಹೆಚ್ಚುತ್ತಿರುವ ಸಂಖ್ಯೆ ನಗರದ ವಸತಿ ಸೌಲಭ್ಯವನ್ನು ಅಸ್ತವ್ಯಸ್ತಗೊಳಿಸಿವೆ. ಅಂತೆಯ ಮುಂದುವರೆದ ರಾಷ್ಟ್ರಗಳ ಕೊಳಚೆ ಪ್ರದೇಶಗಳೊಡನೆ ಹೋಲಿಸಿದಾಗ ನಮ್ಮ ನಗರಗಳ ಕೊಳಚೆ ಪ್ರದೇಶಗಳು ಅತಿ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. ಆದುದರಿಂದ ಭಾರತದಲ್ಲಿ ಕೊಳಚೆ ಪ್ರದೇಶದ ನಿವಾಸಿಗಳ ಹಾಗೂ ಅಲ್ಲಿ ವಾಸಿಸುವರ ಸಮಸ್ಯೆಗಳ ಒಂದು ಪಕ್ಷಿನೋಟದ ಬಗ್ಗೆ ಚರ್ಚಿಸಿಸೋಣ.

**ಭಾರತದಲ್ಲಿ ಕೊಳಚೆ ಪ್ರದೇಶಗಳ ಸಮಸ್ಯೆಗಳು ಈ ಕೆಳಗಿನಂತಿವೆ :**

### 1. ವಸತಿಯ ಸಮಸ್ಯೆ :

ಕೊಳಚೆ ಪ್ರದೇಶಗಳು ಹುಟ್ಟಿಕೊಳ್ಳುವಂತಹ ಸಾಮಾನ್ಯ ಪ್ರದೇಶಗಳೆಂದರೆ, ರೈಲು ಹಾದಿಯ ಇಕ್ಕೆಲಗಳು, ನಗರದ ಮಧ್ಯ ದೊಡ್ಡ ಚರಂಡಿ ಅಥವಾ ನಾಲೆಯ ದಂಡೆ, ದೊಡ್ಡ ಗಿರಣಿ ಮತ್ತು ಕಾರ್ಖಾನೆಯ ಸುತ್ತ–ಮುತ್ತ ಜೌಗು ಮತ್ತು ತಗ್ಗು ಪ್ರದೇಶ ಮತ್ತು ನಾನಾ ಕಾರಣಗಳಿಂದ ಉಪಯೋಗಿಸಿದೆ ಖಾಲಿ ಇರುವ ನಿವೇಶನಗಳು. ಮಾನವ ವಾಸಕ್ಕೆ ಯೋಗ್ಯವಲ್ಲದಂತಹ ಪರಿಸ್ಥಿತಿ ಈ ಕೊಳಚೆ ಪ್ರದೇಶಗಳಲ್ಲಿ, ಪ್ರಧಾನವಾಗಿ ಕಾಣುಬಂತಹುದು. ಯಾವುದೇ ನಿಯಮ, ಕ್ರಮವನ್ನು ಅನುಸರಿಸದೆ ಅವರವರ ಅನುಕೂಲಕ್ಕೆ ತಕ್ಕಂತೆ ಕಟ್ಟಿಕೊಂಡ ಗುಡಿಸಲುಗಳ ಸಮೂಹ, ಈ ಗುಡಿಸಲುಗಳ ನಿರ್ಮಾಣಕ್ಕೆ ಉಪಯೋಗಿಸುವ ಉಪಕರಣಗಳು ಅತಿ ಸಾಮಾನ್ಯವೆನಿಸುವಂತಹವು.

**2. ಜನಸರದಣಿಯ ಸಮಸ್ಯೆ :**

ಜನಸಂಖ್ಯಾ ಸ್ಫೋಟದ ಸಮಸ್ಯೆಯನ್ನು ಎದುರಿಸುತ್ತಿರುದ ಭಾರತ ಸಹಜವಾಗಿಯೇ ಪ್ರಪಂಚದ ಅತಿ ಹೆಚ್ಚಿನ ಜನದಟ್ಟಣೆಯನ್ನು ಅನುಭವಿಸುತ್ತಿದೆ. ಭಾರತದ ನಗರಗಳಲ್ಲಿನ ಜನಸಾಂದ್ರತೆ ದಿನೇ ದಿನೇ ಹೆಚ್ಚುತ್ತಿದೆ. ಅಲ್ಲಿನ ಕೊಳಚೆ ಪ್ರದೇಶಗಳ ಸ್ಥಿತಿಯಂತೂ ಅತ್ಯಂತ ಶೋಚನೀಯ. ಭಾರತದ ಕೊಳಚೆ ಪ್ರದೇಶಗಳಲ್ಲಿನ ಜನರು. ಪ್ರಪಂಚದ ಅನೇಕ ಔದ್ಯೋಗಿಕ ಬೃಹತ್ ನಗರಗಳಲ್ಲಿನ ಜನದಟ್ಟಣೆಯನ್ನು ಮೀರಿಸುವಂತಹ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಾರೆ.

**3. ಆರ್ಥಿಕ ಸ್ಥಿತಿಯ ಸಮಸ್ಯೆ :**

ಅತ್ಯಂತ ಬಡವರು ವಾಸಿಸುವ ಅತ್ಯಂತ ಹಿಂದುಳಿದ ಪ್ರದೇಶ ಕೊಳಚೆ ಪ್ರದೇಶ. ಇದು ಕೊಳಚೆ ಪ್ರದೇಶಕ್ಕೆ ಕೊಡಬಹುದಾದ ಮತ್ತೊಂದು ವಿವರಣೆ. ಅಂತೆಯ ಕಡು ಬಡತನ ಇಂತಹ ಪ್ರದೇಶಗಳ ಒಂದು ಪ್ರಮುಖ ಲಕ್ಷಣ. ಇಲ್ಲಿ ವಾಸಿಸುವವರಲ್ಲಿ ಹೆಚ್ಚು ಪಾಲು ನಗರ ಕಾರ್ಪೋರೇಷನ್ನುಗಳಲ್ಲಿ ನಗರ ನೈರ್ಮಲ್ಯ ಕಾರ್ಯಗಳಲ್ಲಿ ತೊಡಗಿರುವ ನೌಕರರುಗಳು, ದಿನಗೂಲಿ ಮಾಡುವಂತಹವರು, ಕೆಲವು ಬಸ್ ಕಂಡಕ್ಟರುಗಳು, ಕಡಿಮೆ ಮಟ್ಟದ ಆದಾಯದಿಂದಾಗಿ ಜೀವನದೊಂದಿಗೆ ನಿರಂತರ ಸೆಣಸಾಡುವ ಮತ್ತು ಸುಧಾರಿತ ಪ್ರದೇಶಗಳ ಮನೆಯ ಬಾಡಿಗೆಯನ್ನು ಕೊಡುವ ಚೈತನ್ಯವಿಲ್ಲದ ಜನರು ಅನಿವಾರ್ಯವಾಗಿ ಕೊಳಚೆ ಪ್ರದೇಶಗಳ ಸೃಷ್ಟಿ ಮತ್ತು ವೃದ್ಧಿಗೆ ಕಾರಣರಾಗುತ್ತಾರೆ. ಇಲ್ಲಿಯ ಜನರ ವರಮಾನದಲ್ಲಿ ಸ್ಥಿರತೆ ಕಾಣಬರುವುದಿಲ್ಲ.

ಇಂದಿನ ವರಮಾನ ನಾಳೆ ಇರಬೇಕೆಂದಿಲ್ಲ ಅಲ್ಲದೆ ಒಂದೇ ನಗರದ ಒಂದು ಕೊಳಚಿ ಪ್ರದೇಶದಿಂದ ಮತ್ತೊಂದು ಕೊಳಚಿ ಪ್ರದೇಶದ ಜನರ ಆದಾಯದಲ್ಲಿ ಸ್ವಲ್ಪ ವ್ಯತ್ಯಾಸವೂ ಇರಬಹುದು.

**4. ಸೌಲಭ್ಯಗಳ ಕೊರತೆಯ ಸಮಸ್ಯೆ :**

ಭಾರತದ ನಗರಗಳ ಕೊಳಚೆ ಪ್ರದೇಶಗಳಲ್ಲಿ ಪ್ರಾಥಮಿಕ ಸೌಲಭ್ಯಗಳ ಕೊರತೆಯ ಸಮಸ್ಯೆಯು ಪ್ರಮುಖವಾಗಿ ಎದ್ದು ಕಾಣುವಂತಹುದು. ಅತ್ಯಂತ ಅವಶ್ಯ ಸೌಲಭ್ಯಗಳಾದ ಶೌಚ ಮತ್ತು ಸ್ನಾನಗೃಹಗಳೂ ದುರ್ಲಭವಾಗಿವೆ. ಶೌಚಗೃಹಗಳ ಕೊರತೆಯಂತೂ ಒಂದು ಸಮಸ್ಯೆ ಬಹುತೇಕ ಕುಟುಂಬಗಳಿಗೆ ಇದರ ಸೌಲಭ್ಯವೇ ಇಲ್ಲ. ಇನ್ನು ಕೆಲವು ಕಡೆ ಇಡೀ ಪ್ರದೇಶದ ಕುಟುಂಬಗಳ ಜನರು ಸಾಮೂಹಿಕವಾಗಿ ಒಂದೆರಡು ಶೌಚಗೃಹಗಳನ್ನು ಬಳಸಬೇಕಾದ ಪರಿಸ್ಥಿತಿ. ಹಲವು ಕಡೆ ವಾಸಿಸುವ ಸ್ಥಳದಲ್ಲಿಯೇ ಒಂದು ಭಾಗವನ್ನು ಶೌಚಕ್ಕಾಗಿ ಉಪಯೋಗಿಸುವಂತಹ ಪರಿಸ್ಥಿತಿಯು ಇದೆ. ಇಲ್ಲಿಯ ಶೌಚಗೃಹ ಸ್ಥಿತಿ ಹೇಸಿಗೆ ತರುವಂತಹ ಮತ್ತು ದುರ್ಗಂಧವನ್ನು ಉಂಟುಮಾಡುವಂತಹುದು. ನೀರಿನ ಸೌಲಭ್ಯವು ಇದೇ ರೀತಿಯದ್ದು. ನೂರಾರು ಕುಟುಂಬಗಳನ್ನೊಳಗೊಂಡ ಬೃಹತ ಕಟ್ಟಡಗಳಲ್ಲಿನ ಜನರ ಸ್ಥಿತಿ ಒಂದು ರೀತಿಯಾದಾದರೆ, ಗುಡಿಸಲುಗಳಲ್ಲಿ ವಾಸಿಸುವವರ ಸ್ಥಿತಿ ಮತ್ತೊಂದು ರೀತಿಯದು. ಮೊದಲ ವರ್ಗದ ಜನರ ಸ್ಥಿತಿ ಈ ದಿಸೆಯಲ್ಲಿ ಸ್ವಲ್ಪ ಮಟ್ಟಿಗೆ ಉತ್ತಮವೆಂದು ಕಂಡುಬಂದರೆ ಎರಡನೆಯ ವರ್ಗದ ಈ ಜನರ ಸ್ಥಿತಿ ಶೋಚನಿಯವಾದದು. ಇವರಿಗೆ ಸ್ವಂತ ಕೊಳಾಯಿ ಎನ್ನುವುದರ ದೂರದ ಮಾತು. ಇವರಿಗೆ ಸಾರ್ವಜನಿಕ

ಕೊಳಾಯಿಯೆ ಮುಖ್ಯ ಆಧಾರ. ಇಂತಹ ಒಂದೊಂದು ಕೊಳಾಯಿಯನ್ನು ಅವಲಂಬಿಸಿರುವವರ ಸಂಖ್ಯೆಯೂ ನೂರಾರು. ಇಂತಹ ಕೊಳಾಯಿಗಳ ಮುಂದೆ ಪಾತ್ರೆಗಳ ಸಾಲು. ಕಲಹ. ಸ್ವಾಭಾವಿಕವೆನಿಸುವ ಮಟ್ಟಿಗೆ ನಡೆದುಬಂದಿದೆ.

**5. ನೈರ್ಮಲ್ಯ ಮತ್ತು ಆರೋಗ್ಯ ಸಮಸ್ಯೆ :**

ಅನೈರ್ಮಲ್ಯತೆ. ಕೊಳುಕುತನ ಹಿಂದುಳಿದ ರಾಷ್ಟ್ರಗಳಲ್ಲಿ ಅನಿವಾರ್ಯವಾಗಿ ಕಂಡುಬರುವ ಒಂದು ಲಕ್ಷಣವೆಂದು ಒಪ್ಪಿಕೊಂಡರೂ ಸಹ. ಭಾರತದ ನೈರ್ಮಲ್ಯತೆಯ ವಿಷಯದಲ್ಲಿ ಅತ್ಯಂತ ವಿಚಿತ್ರ ಪರಿಸ್ಥಿತಿಯನ್ನು ಕಾಣಬಹುದು. ತಮ್ಮ ಮನೆಯೊಳಗೆ ಚೊಕ್ಕಟತನವನ್ನು ಕಾಪಾಡಿಕೊಂಡು ಬರಲು ತೋರಿಸುವ ಉತ್ಸುಕತೆ. ತಮ್ಮ ನೆರಹೊರೆಯೂ ಚೊಕ್ಕಟವಾಗಿರಬೇಕೆಂಬ ಬಗೆಗೆ ಇಲ್ಲವಾಗಿದೆ. ಅಂತೆಯೇ ಮನೆಯ ಒಳಗಿನ ಎಲ್ಲ ಕಸವನ್ನು ಮನೆಯ ಮುಂದಿನ ಬೀದಿಗೆ ಅಥವಾ ಮನೆಯ ಹಿಂದುಗಡೆ ಬಿಸಾಡುವ ಪ್ರವೃತ್ತಿಯನ್ನು ಕಾಣಬಹುದು. ಮಡಿಯನ್ನು ಆಚರಿಸುವ ಜನರು ತಾವು ಪೂಜಿಸುವ ದೇವಸ್ಥಾನದ ಸುತ್ತಲಿನ ಹೊಲಸಿನ ಬಗೆಗೆ ನಿರ್ಲಿಪ್ತರಾಗಿರುತ್ತಾರೆ. ಯಾವುದೇ ಸಂಕೋಚವಿಲ್ಲದೆ ಸಿಕ್ಕಿದೆಡೆ ಮಲಮೂತ್ರ ವಿಸರ್ಜನೆ ಭಾರತದ ನಗರ ಮತ್ತು ಹಳ್ಳಿಗಳಲ್ಲಿ ಕಾಣಬರುವ ಸಾಮಾನ್ಯ ಪರಿಸ್ಥಿತಿ. ಸುಮಾರು 5–6 ವರುಷಗಳವರೆಗೆ ಮಕ್ಕಳನ್ನು ಮನೆಯ ಮುಂದೆ ಮಲಮೂತ್ರ ವಿಸರ್ಜನೆಗೆ ಪ್ರೋತ್ಸಾಹಿಸುವುದು ಮತ್ತು ವಯಸ್ಕರೂ ನಿಸ್ಸಂಕೋಚವಾಗಿ ರಸ್ತೆಯ ಅಕ್ಕ–ಪಕ್ಕ ಮತ್ತು ಯಾವುದೇ ಮರೆಯೆನಿಸಿದ ಜಾಗದಲ್ಲಿ ಮೂತ್ರ ವಿಸರ್ಜನೆ ಮಾಡುವುದು ಸಾಮಾನ್ಯವೆಂದು ನಡೆದುಬಂದಿದೆ. ಇಷ್ಟಲ್ಲದೆ ಇತರ ಎಲ್ಲ ರೀತಿಯ ಕಸಕೊಳೆಯನ್ನು ಸಿಕ್ಕಿದೆಡೆ ಬಿಸಾಡುವ ಪ್ರವೃತ್ತಿ, ಈ

ಪರಿಸ್ಥಿತಿಯು ಮತ್ತುಷ್ಟು ಹದಗೆಡುವುದಕ್ಕೆ ಕಾರಣವೆನಿಸಿದೆ. ಇದೆಲ್ಲದರ ಪರಿಣಾಮವಾಗಿ ಭಾರತದ ನಗರ ಮತ್ತು ಹಳ್ಳಿಗಳು ಅತಿ ಕೆಳದರ್ಜೆಯ ನೈರ್ಮಲ್ಯದ ಚಿತ್ರಣವನ್ನು ಕೊಡುತ್ತವೆ.

**6. ನೈತಿಕ ಸಮಸ್ಯೆ :**

ಕೊಳಚೆ ಪ್ರದೇಶ ಒಂದು ವಿಷ ವರ್ತುಲವಿದ್ದ ಹಾಗೆ ಇಲ್ಲಿನ ಪರಿಸ್ಥಿತಿ, ವ್ಯಕ್ತಿಯನ್ನು ನೈತಿಕವಾಗಿ ಅಧೋಗತಿಗೆ ತೆಗೆದುಕೊಂಡು ಹೋಗುವಂತಹುದು. ಕಿತ್ತು ತಿನ್ನುವ ಬಡತನ ಇಲ್ಲಿಯ ಜನರನ್ನು ಹಲವಾರು ಸಮಾಜ ಬಾಹಿರ ಚಟುವಟಿಕೆಗಳಲ್ಲಿ ನಿರತವಾಗುವಂತೆ ಪ್ರೇರೇಪಿಸುತ್ತದೆ. ಅಂತೆಯೇ ಸುಲಭ ಜೀವನೊಪಾಯಗಳ ಬಗ್ಗೆ ಇಲ್ಲಿಯ ಜನರನ್ನು ಹಲವಾರು ಸಮಾಜ ಬಾಹಿರ ಚಟುವಟಿಕೆಗಳಲ್ಲಿ ನಿರತವಾಗುವಂತೆ ಪ್ರೇರೇಪಿಸುತ್ತದೆ. ಅಂತೆಯ ಸುಲಭ ಜೀವನೋಪಾಯಗಳ ಬಗ್ಗೆ ಇಲ್ಲಿಯ ಜನರಿಗೆ ಸಹಜ ಆಸಕ್ತಿ ಕಳ್ಳತನ, ಕಳ್ಳಬಟ್ಟಿ ಸರಾಯಿ ತಯಾರಿಕೆ, ಕಳ್ಳ ಸಾಗಣಿಕೆ, ಜೂಜು ಇತ್ಯಾದಿ ಕಾನೂನು ಬಹಿಷ್ಕೃತ, ಅಂತೆಯೆ ಲಾಭದಾಯಿಕ ಚಟುವಟಿಕೆಗಳಿಗೆ ಕೊಳಚೆ ಪ್ರದೇಶಗಳು ಪ್ರೇರಕ ಪ್ರದೇಶಗಳು. ದೈವ ಭೀತಿ ಮತ್ತು ನೈತಿಕ ನೀತಿ ನಿಯಮಗಳಲ್ಲಿ ಹೆಚ್ಚಿನ ಭರವಸೆ ಇಲ್ಲದ ಪ್ರಯುಕ್ತ, ವೇಶ್ಯಾವೃತ್ತಿ, ವ್ಯಭಿಚಾರ ಇವುಗಳೂ ಈ ಪ್ರದೇಶಗಳಲ್ಲಿ ಅವ್ಯಾಹತವಾಗಿ ನಡೆದುಬರುತ್ತಿವೆ.

**7. ಕೊಳಚೆ ಪ್ರದೇಶದಲ್ಲಿನ ಸಂಸ್ಕೃತಿಯ ಸಮಸ್ಯೆ :**

ದಿನನಿತ್ಯದ ಸಂಭಾಷಣೆಯಲ್ಲಿ ಮತ್ತು ಕುಟುಂಬದ ಇತರ ಸದಸ್ಯರನ್ನು ಉದ್ದೇಶಿಸಿ ಮಾತನಾಡುವಾಗ ತುಚ್ಛ ಪದಗಳ ಬಳಕೆ ಸಾಮಾನ್ಯವಾದುದು. ಇಂತಹ ಹೊಲಸು ಭಾಷೆಯ ಬಳಕೆಯನ್ನು ಚಿಕ್ಕ ಹುಡುಗರಲ್ಲಿಯೂ ಕಾಣಬಹುದು. ಇದರ ಬಗ್ಗೆ ತೀವ್ರತರವಾದ ಯಾವುದೇ ಆಕ್ಷೇಪಣೆಯನ್ನು ಇಲ್ಲಿನ ಹಿರಿಯರು ಎತ್ತದೆ ಇರುವುದು ಮತ್ತೊಂದು ಲಕ್ಷಣ. ಇಲ್ಲಿಯ ಜನರ ದೇಷ್ಟಿಕೋನ ಸೀಮಿತವಾದುದು. ತಾತ್ಕಾಲಿಕ ಸೌಲಭ್ಯಗಳ ಬಗೆಗೆ ಮಾತ್ರ ಗಮನ ಕೊಡುವಂತಹುದು ಮತ್ತು ದೂರದೃಷ್ಟಿ ಕಡಿಮೆ. ನೆರೆಹೊರೆಯವರಿಗೆ ತನ್ನಿಂದ ಯಾವುದೇ ರೀತಿಯ ತೊಂದರೆಯಾಗದಂತೆ ನಡೆದುಕೊಳ್ಳಬೇಕೆಂಬ ಬಗೆಗೆ ತಿಳಿವಳಿಕೆಯ ಅಭಾವ, ಅಂತೆಯೇ ಕುಡುಕುತನದಿಂದ ಸ್ವೇಚ್ಛಾವರ್ತನೆ, ನೆರೆ–ಹೊರೆಯವರಿಗೂ ತೊಂದರೆಯಾಗುವ ಮಟ್ಟಿಗೆ ಗಲಾಟೆ, ಇಲ್ಲಿನ ಸಾಮಾನ್ಯ ದೃಶ್ಯ ಚೊಕ್ಕಟತನ ನೈರ್ಮಲ್ಯಗಳ ಬಗ್ಗೆ ಅಲಕ್ಷ್ಯ, ಸ್ವೇಚ್ಛಾವರ್ತನೆ, ಒರಟುತನ, ಸಾರ್ವಜನಿಕ ಆಸ್ತಿ–ಪಾಸ್ತಿಗಳ ಬಗ್ಗೆ ಅಲಕ್ಷ್ಯ ಶಾಂತ ವಾತಾವರಣವನ್ನು ಕಾಪಾಡಿಕೊಂಡು ಹೋಗಬೇಕು ಎನ್ನುವ ಯಾವ ಆಸಕ್ತಿಯೂ ಇಲ್ಲದಿರುವಿಕೆ ಇಲ್ಲಿಯ ಜನರಲ್ಲಿ ವ್ಯಾಪಕವಾಗಿ ಕಂಡುಬರುವಂತಹುದು.

**8. ಸಾಮಾಜಿಕ ಪ್ರತ್ಯೇಕತೆಯ ಸಮಸ್ಯೆ :**

ಸಾಮಾಜಿಕ ಪ್ರತ್ಯೇಕತೆ ಕೊಳಚೆ ಪ್ರದೇಶಗಳ ಮತ್ತೊಂದು ಪ್ರಮುಖ ಸಮಸ್ಯೆ ಭೌಗೋಳಿಕವಾಗಿ ಇಲ್ಲಿಯ ಜನರ ವಾಸಸ್ಥಳ ಪ್ರತ್ಯೇಕವಾಗಿರುವುದರ ಜೊತೆಗೆ

ಸಾಮಾಜಿಕ ಅಂತರದ ಭಾವನೆಯೂ ವ್ಯಾಪಕವಾಗಿ ಕಂಡುಬರುತ್ತದೆ. ಕೊಳಚೆ ಪ್ರದೇಶದ ನಿವಾಸಿಗಳನ್ನು ಸಮಾಜ ನಿಕೃಷ್ಟ ದೃಷ್ಟಿಯಿಂದಲೇ ನೋಡುತ್ತದೆ. ನಾನಾ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಾರಂಭ ಮತ್ತು ಚಟುವಟಿಕೆಗಳಲ್ಲಿ ಈ ಜನರ ಭಾಗವಹಿಸುವಿಕೆ ಅತಿ ಕಡಿಮೆ. ಒಟ್ಟಿನಲ್ಲಿ ಕೊಳಚೆ ಪ್ರದೇಶದ ಜನರು ಮತ್ತು ಇತರರ ನಡುವೆ ಸ್ಪಷ್ಟ ಸಾಮಾಜಿಕ ಅಂತರ ಕಂಡುಬರುತ್ತದೆ.

## 1.9 ಸಮಸ್ಯೆಯ ಕುರಿತು ಹೇಳಿಕೆ :

1. ಸಾಮಾಜಿಕ ಸಮಸ್ಯೆಗಳನ್ನು ಸಾಮಾಜಿಕ ರೋಗರುಜಿನಗಳು ಎಂದು ಪರಿಗಣಿಸಬಹುದಾಗಿದೆ.
2. ಸಮಾಜದಲ್ಲಿ ಕಂಡುಬರುವ ರೋಗರುಜಿನಗಳ ಸಂಖ್ಯೆ, ಗಾತ್ರ, ವೈವಿಧ್ಯತೆ ತೀವ್ರತೆಗಳಲ್ಲಿ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತವೆ.
3. ನಗರ ಸಮಸ್ಯೆಗಳಿಗೆ ಕೊನೆಯೇ ಇಲ್ಲ ಎಂಬುದಾಗಿ ಹೇಳಬೇಕಾಗಿದೆ ಜಗತ್ತಿನ ಯಾವ ನಗರವು ಸಮಸ್ಯೆಗಳಿಂದ ಮುಕ್ತವಾಗಿಲ್ಲ.
4. ಮುಂದುವರಿದಿರುವ ರಾಷ್ಟ್ರಗಳಲ್ಲಿನ ನಗರಗಳ ಸಮಸ್ಯೆಗಳು ಕಡಿಮೆ ಇದ್ದರೂ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿನ ನಗರಗಳ ಸಮಸ್ಯೆಗಳು ಬಹಳವಾಗಿ ಕಂಡುಬರುತ್ತಿರುವುವು.
5. ಆಧುನಿಕ ನಗರಗಳಲ್ಲಿ ಬಹಳಮಟ್ಟಿಗೆ ಇರುವ ಸಮಸ್ಯೆಗಳು ಇನ್ನೂ ಬೃಹದಾಕಾರವಾಗಿ ಬೆಳೆಯುತ್ತಾ ಹೋಗುತ್ತಿರುವುದರ ಜೊತೆಗೆ ಹೊಸ ಸಮಸ್ಯೆಗಳೂ ಹುಟ್ಟಿಕೊಳ್ಳುತ್ತವೆ.
6. ಪ್ರಸ್ತುತ ನಗರ ಸಮಸ್ಯೆಗಳು ಅನೇಕ ಇವೆ. ಅವುಗಳಲ್ಲಿ ಮುಖ್ಯವಾದವು ಈ ಕೆಳಕಂಡಂತಿರುವವು.

   ಎ) ವಾಣಿಜ್ಯೀಕೃತ ಮನರಂಜನೆ.

ಬಿ) ಕೊಳಚೆ ಪ್ರದೇಶಗಳು.

ಸಿ) ಅಪರಾಧ.

ಡಿ) ಬಾಲಾಪರಾಧ

ಇ) ಭಿಕ್ಷಾಟನೆ ಇನ್ನೂ ಮುಂತಾದವು.

7. ನಗರೀಕರಣದಿಂದ ಉಂಟಾಗುವ ಕೊಳಚೆ ಪ್ರದೇಶಗಳು ಅಥವಾ ಕೊಳಗೇರಿಗಳು ಅಥವಾ ಕೊಂಪೆಗಳು ನಾಗರಿಕತೆಯ ಕಪ್ಪು ಚುಕ್ಕೆಗಳು ಎನ್ನಬಹುದು.
8. ಕೊಳಗೇರಿಯಲ್ಲಿ ವಸತಿಯ ಸಮಸ್ಯೆ, ಆರ್ಥಿಕ ಸಮಸ್ಯೆ, ನೈತಿಕ ಸಮಸ್ಯೆ, ನೈರ್ಮಲ್ಯ ಮತ್ತು ಆರೋಗ್ಯ ಸಮಸ್ಯೆ ಇನ್ನೂ ಮುಂತಾದ ಸಮಸ್ಯೆಗಳಿವೆ.
9. ಇಲ್ಲಿನ ನಿವಾಸಿಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಕೇಂದ್ರಗಳು, ನ್ಯಾಯಬೆಲೆ ಅಂಗಡಿಗಳು ಶೇ 26% ಪ್ರಮಾಣದಲ್ಲಿ ಸೇವೆಯನ್ನು ಕಲ್ಪಿಸುತ್ತಿದ್ದು ಇನ್ನೂ ಶೇ 74% ಪ್ರಮಾಣದ ಸೇವೆಗಳು ಲಭಿಸಬೇಕಿದೆ.
10. ಸಾಮಾಜಿಕವಾಗಿ ಶೇ 70% ರಷ್ಟು ಪರಿಶಿಷ್ಠ ಜಾತಿ ಶೇ.26% ರಷ್ಟು ಹಿಂದುಳಿದ ಮತ್ತು ಅಲ್ಪಸಂಖ್ಯಾತ ಹಾಗೂ ಶೇ 2% ರಷ್ಟು ಪರಿಶಿಷ್ಠ ಜನಾಂಗ ಇನ್ನೂಳಿದ ಶೇ 2% ರಷ್ಟು ಜನರು ಇತರೆ ಜಾತಿಗಳಿಗೆ ಸೇರಿದ ಅಸ್ಪೃಶ್ಯ ಸಮುದಾಯಗಳೆ ಇಂತಹ ಸ್ಥಳಗಳಲ್ಲಿ ಬದುಕುತ್ತಿರುವುದು ಗೋಚರಿಸುತ್ತದೆ.

**1.10 ಕೊಳಚೆ ಪ್ರದೇಶಗಳ ಸುಧಾರಣಾ/ನಿರ್ಮೂಲನೆ ಕಾರ್ಯದಲ್ಲಿ ರಾಜ್ಯ ಸರ್ಕಾರ ಪ್ರಯತ್ನ:**

ಕೊಳಚೆ ಪ್ರದೇಶಗಳ ಸುಧಾರಣಾ ಕಾರ್ಯದಲ್ಲಿ ಹಾಗೂ ಸಾಧ್ಯವಿದೆಡೆಗಳಲ್ಲಿ ಅವುಗಳನ್ನು ನಿರ್ಮೂಲನೆ ಮಾಡಿ ಬದಲಿ ವ್ಯವಸ್ಥೆಗಳನ್ನು ಕಲ್ಪಿಸಿಕೊಡುವಲ್ಲಿ ಹಲವಾರು ರಾಜ್ಯಗಳು ಕೆಲವು ಪ್ರಯತ್ನಗಳನ್ನು ನಡೆಸಿವೆ. ಅವುಗಳಲ್ಲಿ ಕರ್ನಾಟಕದಲ್ಲಿ 1973ರಲ್ಲಿ ಕೊಳಚೆ ಪ್ರದೇಶಗಳ ನಿರ್ಮೂಲನೆ ಮತ್ತು ಉತ್ತಮೀಕರಣ ಕಾಯ್ದೆಯನ್ನು 1975ರಲ್ಲಿ

ಸ್ಲಂ ಜನರ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ರಾಜ್ಯದಲ್ಲಿ ಆಚರಣೆಗೆ ತರಲಾಯಿತು. ಆದರೆ ಸ್ಲಂಗಳ ಅಭಿವೃದ್ಧಿ ನಿಟ್ಟಿನಲ್ಲಿ ಆಗಿರುವ ಕೆಲಸ ಮಾತ್ರ ಕಡಿಮೆ ಇಡೀ ಕಾಯ್ದೆಯ ಚೌಕಟ್ಟು ಕೇವಲ ಜನರ ಆರೋಗ್ಯ ಹಾಗೂ ನೈರ್ಮಲ್ಯ ಕಾಪಾಡುವ ಸೀಮಿತ ದೃಷ್ಟಿಯಲ್ಲಿ ತರಲಾಯಿತೇ ವಿನಃ ಸ್ಲಂ ಜನರ ಇಡೀ ಬದುಕುವ ಹಕ್ಕನ್ನು ಖಾತ್ರಿಪಡಿಸುವ ದೃಷ್ಟಿಕೋನದಲ್ಲಿ ರಚಿಸಿಲ್ಲ ಇದು ದೊಡ್ಡ ಕೊರತೆಯಾಗಿದೆ.

**ಈ ಕಾಯ್ದೆಯ ಪ್ರಮುಖ ಅಂಶಗಳು :**

1. ಕೊಳಗೇರಿಗಳನ್ನು ಘೋಷಿಸಿ ಕಾನೂನು ವ್ಯಾಪ್ತಿಗೆ ತರುವುದು.
2. ಇನ್ನು ಮುಂದೆ ಕೊಳಗೇರಿಗಳು ಹೆಚ್ಚಾಗದಂತೆ ತಡೆಗಟ್ಟುವುದು.
3. ಕೊಳಗೇರಿಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಮೂಲಭೂತ ಸೌಲಭ್ಯ ಒದಗಿಸುವುದು.
4. ಸ್ಲಂ ನಿವಾಸಿಗಳ ಪೂನರ್ ವಸತಿಗಾಗಿ ಭೂ ಸ್ವಾಧಿನ ಮಾಡುವುದು / ಖರೀದಿಸುವುದು.
5. ಕೊಳಗೇರಿ ನಿವಾಸಿಗಳಿಗೆ ಸೂಕ್ತ ರಕ್ಷಣೆ ನೀಡುವುದು.
6. ಕೊಳಗೇರಿ ನಿವಾಸಿಗಳಿಗೆ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

ಕೊಳಚೆ ಪ್ರದೇಶದಲ್ಲಿ ನಿರ್ಮಿಸುವ ಮನೆಗಳಿಗೆ ಕೇಂದ್ರ ಶೇ. 50ರಷ್ಟು, ರಾಜ್ಯ ಸರಕಾರ ಶೇ. 40ರಷ್ಟು ಹಾಗೂ ಫಲಾನುಭವಿಗಳು ಶೇ. 10ರಷ್ಟನ್ನು ಪಾವತಿಸಬೇಕು. ಶೇ. 10ರಷ್ಟು ಮೊತ್ತದಲ್ಲಿ ಪರಿಶಿಷ್ಟ ವರ್ಗದವರು 21 ಸಾವಿರ ರೂ. ಹಾಗೂ ಇತರೆ ವರ್ಗದವರು 35 ಸಾವಿರ ರೂ. ಪಾವತಿಸಬೇಕು.

## ವಸತಿ ಮತ್ತು ನಗರಾಭಿವೃದ್ಧಿ ನಿಗಮ HUDCO:-

ಹುಡ್ಕೊ ನಗರವಸತಿ ಸಮಸ್ಯೆ ಪರಿಹಾರಕ್ಕೆ ವರವಾಗಿ ಪರಿಣಮಿಸಿದೆ. ಇದು ಕೇಂದ್ರ ಮಟ್ಟದಲ್ಲಿ ವಸತಿ ಸಮಸ್ಯೆ ನಿವಾರಣೆಗೆ ಸೂಕ್ತ ತಾಂತ್ರಿಕ ಸಲಹೆಗಳನ್ನು ಮತ್ತು ರಾಜ್ಯ ಹಾಗೂ ನಗರಗಳ ಮಟ್ಟದಲ್ಲಿ ವಸತಿ ನಿರ್ಮಾಣ ನಿಯೋಗಿಗಳಿಗೆ ವಸತಿ ಅಭಿವೃದ್ಧಿಗಾಗಿ ಸಹಾಯವನ್ನು ನೀಡುತ್ತದೆ. ಹುಡ್ಕೊ ರಾಷ್ಟ್ರದಾದ್ಯಂತ ಎಲ್ಲಾ ಪಟ್ಟಣ, ನಗರಗಳಲ್ಲಿ ವಸತಿಗಳನ್ನು ನಿರ್ಮಿಸಲು ತಾಂತ್ರಿಕ ಮತ್ತು ಹಣಕಾಸಿನ ಸಹಾಯವನ್ನು ನೀಡುತ್ತಿದೆ. ಇದು ರಾಷ್ಟ್ರದಾದ್ಯಂತ ನೂರಾರು ವಸತಿ ಯೋಜನೆಗಳನ್ನು ರೂಪಿಸಿದೆ.

ಸುಮಾರು 44,000/– ಕೋಟಿ ರೂ. ವಸತಿ ನಿರ್ಮಾಣದ ಯೋಜನೆಗಳನ್ನು 147 ನಗರಗಳಲ್ಲಿ ಹರಡುವಂತೆ ರೂಪಿಸಿದೆ. ಈ ಯೋಜನೆಯಂತೆ ನಗರಗಳಲ್ಲಿ ಒಂದು ದಶಲಕ್ಷ ಮನೆಗಳುಳ್ಳ ವಸತಿ ಸಮುಚ್ಚಯಗಳನ್ನು ನಿರ್ಮಿಸಿದೆ. ಭಾರತದ ನಗರಗಳಲ್ಲಿ ವಾರ್ಷಿಕವಾಗಿ ಹೆಚ್ಚುತ್ತಿರುವ 4ಲಕ್ಷ ಮನೆಗಳ ಬೇಡಿಕೆಯನ್ನು ಪೂರೈಸಲು ಹುಡ್ಕೊ ಯೋಜನೆಯನ್ನು ರೂಪಿಸಿದೆ. ಪ್ರತಿ 1000 ನಗರ ಜನಸಂಖ್ಯೆಗೆ ಕನಿಷ್ಠ 10 ಮನೆಗಳನ್ನಾದರೂ ನಿರ್ಮಿಸಬೇಕೆಂಬ ನಿಯಮವಿದೆ. ಆದರೆ ಭಾರತದಲ್ಲಿ ಈ ಪ್ರಮಾಣವು 3.5ರಷ್ಟು ಮಾತ್ರವಿದೆ.

**ಹುಡ್ಕೊ ಯೋಜನೆಯ ಮುಖ್ಯಾಂಶಗಳು :**

1. ಹುಡ್ಕೊ ರಾಜ್ಯ ಸರ್ಕಾರಗಳಿಗೆ, ಕೈಗಾರಿಕಾ ಮಂಡಳಿಗಳಿಗೆ, ಗೃಹ ನಿರ್ಮಾಣ ಮಂಡಳಿಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು, ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಸತಿ ನಿರ್ಮಿಸಲು ಸಾಲವನ್ನು ದೊರಕಿಸುತ್ತದೆ.

2. ಸರ್ಕಾರಿ ನೌಕರರು ಸ್ವಂತ ಮನೆ ನಿರ್ಮಿಸಲು ಸುಲಭ ಸಾಲ ಸೌಲಭ್ಯವನ್ನು ವಸತಿ ಅಭಿವೃದ್ಧಿ ಹಣಕಾಸು ನಿಗಮ **Housing Development Finance Corporation – HDFC** ದ ಮೂಲಕ ನೀಡುತ್ತಿದೆ.

3. ಹೊಡ್ಕೊ ಕೊಳಚೆ ನಿವಾಸಿಗಳಿಗೆ ವಸತಿ ನಿರ್ಮಾಣ ಮಾಡಲು ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿಗಳಿಗೆ ರಾಜ್ಯ ಸರ್ಕಾರಗಳ ಮೂಲಕ ಸಾಲ ಸೌಲಭ್ಯವನ್ನು ಒದಗಿಸುತ್ತಿದೆ.

4. ನಗರಗಳ ವಸತಿ ಯೊಜನೆಗಾಗಿ ಹುಡ್ಕೊ ವತಿಯಿಂದ ಅನೇಕ ಅಗ್ರ ಯೋಜನೆಗಳನ್ನು ರೂಪಿಸಿ ಮೂರ್ಪಾಡುಗೊಳಿಸಲಾಗಿದೆ.

5. ರೂಪಿತ ನಕಾಶೆಗಳು ನಿರ್ಮಿಸಿದ ವಸತಿ ವಿನ್ಯಾಸಕ್ಕೂ ಹೊಂದಾಣಿಕೆಯಿಲ್ಲ. ನಗರಾಭಿವೃದ್ಧಿ ಪ್ರಾಧಿಕಾರಗಳು ಸುಂದರ ನೀರ್ಚಿಲುಮೆ, ಶಿಲ್ಪಕಲೆ ಮತ್ತು ಅಲಂಕಾರಿಕ ವಾಣಿಜ್ಯ ಸಂಕೀರ್ಣಗಳ ನಿರ್ಮಾಣದತ್ತ ಹೆಚ್ಚು ಒಲವು ತೋರುತ್ತಿವೆ.

6. ನಗರಗಳ ನೆಲದ ಸದ್ಬಳಕೆಯತ್ತ ಇದು ಗಮನ ಹರಿಸಿಲ್ಲ. ಜನಸಂದಣಿ ಕಡಿಮೆಗೊಳಿಸುವಲ್ಲಿ ಹುಡ್ಕೊ ಯೋಜನೆ ವಿಫಲವಾಗಿದೆ. ಕೊಳಚೆ ನಿವಾಸಿಗಳಿಗೆ ಮತ್ತು ಅತಿ ಬಡವರಿಗೆ ನಿರ್ಮಿಸಲಾದ ವಸತಿಗಳು ನಗರಗಳ ಅಂಚಿನಲ್ಲಿದ್ದು ಅಲ್ಲಿ ವಾಸಿಸುತ್ತಿರುವ ನಾಗರಿಕರಿಗೆ ರಸ್ತೆ, ಸಾರಿಗೆ ಸೌಲಭ್ಯ, ನೀರು ಸರಬರಾಜು, ಚರಂಡಿ ವ್ಯವಸ್ಥೆ, ನ್ಯಾಯ ಬೆಲೆ ಅಂಗಡಿಗಳು, ರಸ್ತೆ, ಆಸ್ಪತ್ರೆ, ಉದ್ಯಾನವನ ಮುಂತಾದ ನಾಗರಿಕ ಸೌಲಭ್ಯಗಳನ್ನೊದಗಿಸಬೇಕು.

7. ಹುಡ್ಕೊ ನಿರ್ಮಿಸುವ ಮನೆಗಳ ಬೆಲೆ ಕಡಿಮೆ ಇದ್ದರೂ ಅದು ಬಡವರ ಕೈಗೆ ಎಟುಕದಾಗಿದೆ. ನಿರ್ಮಾಣ ವಿಳಂಬದಿಂದ ಈ ಪರಿಸ್ಥಿತಿ ಉಂಟಾಗಿದೆ.

8. ನಗರಗಳ ವಸತಿ ಯೋಜನೆಗಳಿಗೆ ಹಣಕಾಸಿನ ಕೊರತೆಯಿದ್ದು ಸಾರ್ವಜನಿಕ ಉದ್ಯಮಗಳು ಮತ್ತು ಖಾಸಗಿ ಸಂಘಟನೆಗಳ ಸಹಕಾರ ತೀರ ಕಡಿಮೆಯಿದೆ.

## ಸ್ವರ್ಣ ಜಯಂತಿ ಶಹರಿ ರೋಜಗಾರ ಯೋಜನೆ :

ಭಾರತದಲ್ಲಿನ ನಗರಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವಾತಂತ್ರ್ಯ ಪಡೆದು 50 ವರ್ಷಗಳಾದ ನಂತರ ಅದರ ಸುವರ್ಣ ಸ್ವಾತಂತ್ರೋತ್ಸವವನ್ನು ಆಚರಣೆ ಮಾಡಿದ ಸವಿನೆನಪಿಗಾಗಿ ಸ್ವರ್ಣಜಯಂತಿ ಶಹರಿ ರೋಜಗಾರ ಯೋಜನೆಯನ್ನು ಜಾರಿಗೆ ತಂದಿರುವುದು ಒಂದು ಮಹತ್ವಪೂರ್ಣ ಅಂಶವಾಗಿರುವುದು.

ಸ್ವರ್ಣಜಯಂತಿ ಶಹರಿ ರೋಜಗಾರ ಯೋಜನೆಯನ್ನು ನಗರ ಸಮುದಾಯಗಳ ನಿರುದ್ಯೋಗಿಗಳಿಗೆ ಹಾಗೂ ತಕ್ಕ ಕೆಲಸವಿರದ ಬಡಜನತೆಗೆ ಸ್ವಂತ ಉದ್ಯೋಗ ಹಾಗೂ ವೇತನಾಧಾರಿತ ಉದ್ಯೋಗಗಳನ್ನು ಅಥವಾ ಮಜೂರಿ ಉದ್ಯೋಗಗಳನ್ನು ಕಲ್ಪಿಸುವ ಮೂಲಕ ಲಾಭದಾಯಕ ಉದ್ಯೋಗವನ್ನು ನೀಡಲು ಯೋಜಿಸಲಾಗಿದೆ. ಸ್ವರ್ಣ ಜಯಂತಿ ಶಹರಿ ರೋಜಗಾರ ಯೋಜನೆಯ ಅಡಿ ಖರ್ಚು ಮಾಡಲಾಗುವ ಹಣವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಕ್ರಮವಾಗಿ ಶೇಕಡಾ 72:25ರ ಪ್ರಮಾಣದಲ್ಲಿ ನೀಡುತ್ತವೆ. ಅಂದರೆ ಕೇಂದ್ರ ಸರ್ಕಾರವು ಶೇಕಡಾ 75 ಭಾಗವನ್ನು ಮತ್ತು ರಾಜ್ಯ ಸರ್ಕಾರವು ಶೇಕಡಾ 25 ಭಾಗವನ್ನು ನೀಡುವವು.

### ಸ್ವರ್ಣಜಯಂತಿ ಶಹರಿ ರೋಜಗಾರ ಯೋಜನೆಯು 2 ವಿಶೇಷ ಕಾರ್ಯಕ್ರಮಗಳು ಒಳಗೊಂಡಿರುವುವು :

1. ನಗರ ಸ್ವಯಂ ಉದ್ಯೋಗ ಕಾರ್ಯಕ್ರಮ.
2. ನಗರ ವೇತನಾಧಾರಿತ ಅಥವಾ ಮಜೂರಿ ಉದ್ಯೋಗ ಕಾರ್ಯಕ್ರಮ.

## ಸ್ವರ್ಣ ಜಯಂತಿ ಶಹರಿ ರೋಜಗಾರ ಯೋಜನೆ ಸಂಬಂಧಿಸಿದ ಮುಖ್ಯ ಅಂಶಗಳು :

**1. ನೆರೆಹೊರೆ ಗುಂಪುಗಳು :**

ನೆರೆಹೊರೆ ಗುಂಪು ಒಂದು ಮೊಹಲ್ಲಾ ಅಥವಾ ಬಸ್ತಿ ಅಥವಾ ನೆರೆಹೊರೆಯಲ್ಲಿ ವಾಸಿಸುವ ಮಹಿಳೆಯರ ಚಿಕ್ಕ ವಿದ್ಯುಕ್ತವಲ್ಲದ ಸಮೂಹವಾಗಿರುತ್ತದೆ.

i) ಆ ಗುಂಪಿನ ಕುಟುಂಬಗಳಿಗೆ ಮಾಹಿತಿ ಹಾಗೂ ಸಂಪರ್ಕದ ಮಾಧ್ಯಮವಾಗಿ ಸೇವೆಯನ್ನು ನಿರ್ವಹಿಸಬೇಕು.

ii) ನೆರೆಹೊರೆ ಸಮಿತಿ ಮತ್ತು ಸಮುದಾಯ ಅಭಿವೃದ್ಧಿ ಸಂಘ ಮತ್ತು ಇತರ ವೇದಿಕೆಗಳಲ್ಲಿ ತಮ್ಮ ಸಮೂಹದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು.

iii) ನೆರೆಹೊರೆ ಮಟ್ಟದ ಆಯ್ದ ಚಟುವಟಿಕೆಗಳು ಯೋಜಿಸುವಾಗ, ಅನುಷ್ಠಾನಗೊಳಿಸುವಾಗ ಹಾಗೂ ನಿರ್ವಹಣೆಯಲ್ಲಿ ಸಹಕಾರ ನೀಡುವುದು.

iv) ಸಮುದಾಯದ ಅಭಿವೃದ್ಧಿ ಹಾಗೂ ಸುಧಾರಣೆಗಾಗಿ ಸಕ್ರಿಯವಾಗಿ ಸಹಭಾಗಿಗಳಾಗುವಂತೆ ಜನರನ್ನು ಪ್ರೇರೇಪಿಸುವುದು. ಉತ್ತೇಜಿಸುವುದು ಹಾಗೂ ಪ್ರೋತ್ಸಾಹಿಸುವುದು.

**2. ನೆರೆಹೊರೆ ಸಮಿತಿಗಳು :**

ನೆರೆಹೊರೆ ಸಮಿತಿಯು ಆದಷ್ಟೂ ಹತ್ತಿರದ ಪ್ರದೇಶಗಳನ್ನು ತೆಗೆದುಕೊಂಡು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಒಂದು ಚುನಾವಣಾ ವಾರ್ಡಿನಲ್ಲಿರುವ ನೆರೆಹೊರೆ ಗುಂಪುಗಳ ಪ್ರತಿನಿಧಿಗಳ ವಿದ್ಯುಕ್ತ ಸಂಘಟನೆಯಾಗಿರುತ್ತದೆ.

**ನೆರೆಹೊರೆ ಸಮಿತಿಗಳ ಪ್ರಮುಖ ಕರ್ತವ್ಯಗಳು :**

i) ಸ್ಥಳೀಯ ಸಮಸ್ಯೆಗಳು ಹಾಗೂ ಆದ್ಯತೆಗಳನ್ನು ಗುರುತಿಸುವುದು.

ii) ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸಲು ಹಾಗೂ ಚಿಕ್ಕ ಯೋಜನೆಗಳ ಯೋಜನಾ ಗುರಿಗಳನ್ನು ಸಾಧಿಸಲು ಜನರ ಗುಂಪುಗಳ ಕ್ರಿಯಾಶೀಲ ಪಾಲ್ಗೊಳ್ಳುವಿಕೆಯ ಬಗ್ಗೆ ಸಲಹೆ ಸೂಚನೆಗಳನ್ನು ನೀಡುವುದು.

iii) ಸ್ಥಳಿಯ ಚಟುವಟಿಕೆಗಳಿಗೆ ಜವಾಬ್ದಾರಿಯುತ ಸಂಸ್ಥೆಗಳ ಸೇವೆಯನ್ನು ಕಲ್ಪಿಸುವುದು ಮತ್ತು ಸಾರ್ವಜನಿಕ ಒಪ್ಪಂದ ಮಾಡಿಸುವಲ್ಲಿ ಸಹಾಯಕವಾಗುವುದು.

iv) ಸಮಯಾನುಸಾರ ಫಲಾನುಭವಿಗಳಿಂದ ಸಾಲ ಮರುಪಾತಿಯನ್ನು ನಿರ್ವಹಿಸುವುದು.

v) ಮಾರ್ಗಸೂಚಿಯ ಪ್ರಕಾರ, ಸಮುದಾಯ ಸಮೀಕ್ಷೆ ಮಾಡುವುದು ಇಲ್ಲವೆ ಸಮೀಕ್ಷೆ ಮಾಡಲು ನೆರವಾಗುವುದು.

**3. ಸಮುದಾಯ ಅಭಿವೃದ್ಧಿ ಸಂಘ :**

ಸಮುದಾಯ ಅಭಿವೃದ್ಧಿ ಸಂಘವು ತಾಲ್ಲೂಕ ಮಟ್ಟದಲ್ಲಿ ಎಲ್ಲಾ ನೆರೆ-ಹೊರೆ ಸಮಿತಿಗಳ ಒಂದು ವಿದ್ಯುಕ್ತ ಸಂಘಟನೆಯಾಗಿದ್ದು, ಸಮಾನ ಗುರಿ ಮತ್ತು ಉದ್ದೇಶಗಳನ್ನು ಹೊಂದಿರುತ್ತದೆ. ನೆರೆಹೊರೆ ಸಮಿತಿಗಳಿಂದ ಚುನಾಯತ ಇಲ್ಲವೇ ಆಯ್ಕೆಯಾದ ಪ್ರತಿನಿಧಿಗಳು ಸಮುದಾಯ ಅಭಿವೃದ್ಧಿ ಸಂಘದ ಮತದಾನದ ಹಕ್ಕನ್ನುಳ್ಳ ಸದಸ್ಯರಾಗಿರುತ್ತಾರೆ ಮತ್ತು ಸಮುದಾಯ ಅಭಿವೃದ್ಧಿ ಸಂಘದ ವ್ಯಾಪ್ತಿಯಲ್ಲಿ ಬರುವ ಸಂಬಂಧಿತ ಪ್ರತಿಯೊಂದು ಕುಟುಂಬದ ಒಬ್ಬಳು ಮಹಿಳೆಯೂ ಈ ಸಂಘದ ಮತದಾನದ ಹಕ್ಕಿಲ್ಲದ ಸದಸ್ಯರಾಗಿರುತ್ತಾರೆ.

**ಸಮುದಾಯ ಅಭಿವೃದ್ಧಿ ಸಂಘಗಳ ಪ್ರಮುಖ ಕರ್ತವ್ಯಗಳು :**

i) ಸಮಾಜದ ಎಲ್ಲಾ ವರ್ಗಗಳ ವಿಶೇಷವಾಗಿ ಮಹಿಳೆಯರ ಮತ್ತು ಮಕ್ಕಳ ಅವಶ್ಯಕತೆಗಳನ್ನು ಪ್ರತಿಬಿಂಬಿಸುವುದು.

ii) ಅವರ ಅವಶ್ಯಕತೆಗಳನ್ನು ಪೂರೈಸುವ ದಿಸೆಯಲ್ಲಿನ ಕಾರ್ಯಗಳಿಗೆ ಇಲ್ಲವೇ ಚಟುವಟಿಕೆಗಳಿಗೆ ಇತರ ಸಂಸ್ಥೆಗಳ ಮತ್ತು ಇಲಾಖೆಗಳ ಸಹಕಾರವನ್ನು ಕ್ರೂಢೀಕರಿಸುವುದು.

iii) ಸೂಕ್ತ ನಿರ್ದಿಷ್ಟ ತರಬೇತಿ ಕಾರ್ಯಕ್ರಮಗಳನ್ನು ಗುರುತಿಸಿ ಅವುಗಳನ್ನು ಏರ್ಪಡಿಸುವುದು.

iv) ಆರ್ಥಿಕ ಮತ್ತು ನಿವಾಸ ಇಲ್ಲವೇ ಸೂರು ಸೌಲಭ್ಯಕ್ಕಾಗಿ ಅರ್ಹ ಫಲಾನುಭವಿಗಳನ್ನು ಗುರುತಿಸುವ ಸಲುವಾಗಿ ಸಮಾಜದ ಸಮೀಕ್ಷೆಗಳನ್ನು ನಡೆಸುವುದು ಮತ್ತು ಆ ಸಮೀಕ್ಷೆಗಳಿಗೆ ಸಹಕಾರ ನೀಡುವುದು.

v) ಸಾರ್ವಜನಿಕ ಯೋಜನೆಗಳನ್ನು ಮತ್ತು ಪ್ರಸ್ತಾವನೆಗಳನ್ನು ರೂಪಿಸುವುದು. ಸಮುದಾಯದ, ನಗರದ ಹಾಗೂ ಇತರ ವಲಯ ವಿಭಾಗಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು.

**ಜವಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮೀಷನ್ – JNNRURM :**

ನೆಹರು ರಾಷ್ಟ್ರೀಯ ನಗರ ನವೀಕರಣ ಮೀಷನನ್ನು ಕೇಂದ್ರ ಸರ್ಕಾರವು 2004 ರಲ್ಲಿ ಅನುಷ್ಠಾನಗೊಳಿಸಿತು ಯೋಜನೆಯ ಮುಖ್ಯ ಉದ್ದೇಶ ನಗರಗಳ ಮೂಲ ಸೌಲಭ್ಯಗಳನ್ನು ಸುಧಾರಿಸುವುದು, ನಗರಾಡಳಿತವನ್ನು ಸುಧಾರಿಸುವುದು ಮತ್ತು ಮೂಲಸೇವೆಗಳನ್ನೊದಗಿಸುವುದಾಗಿದೆ. ಈ ಯೋಜನೆಯನ್ನು ಕೇಂದ್ರದ ನಗರ ಉದ್ಯೋಗ ಮತ್ತು ಬಡತನ ತಗ್ಗಿಸುವಿಕೆ ಸಚಿವಾಲಯದ ನೇತೃತ್ವದಲ್ಲಿ

ಜಾರಿಗೊಳಿಸಲಾಗುತ್ತಿದೆ. ಒಂದು ದಶಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆವುಳ್ಳ ನಗರದಲ್ಲಿ ಈ ಯೋಜನೆಯನ್ನು ಅಳವಡಿಸಲಾಗುವುದು. ಪ್ರಾರಂಭಿಕವಾಗಿ 63 ನಗರಗಳು ಮತ್ತು ಧಾರ್ಮಿಕ ಹಾಗೂ ಪ್ರವಾಸೋದ್ಯಮ ಪ್ರಧಾನ 23 ನಗರಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗುವುದು. ಈ ಮಿಷನ್ನಿನ 2 ವಿಭಾಗಗಳು ಒಳಗೊಂಡಿವೆ.

1. ಮೂಲ ಸೌಲಭ್ಯಗಳು, ಆಡಳಿತ, ಸುಧಾರಣೆಯನ್ನು.

2. ಮೂಲ ಸೇವೆಗಳ ಉಸಾಬರಿ ವಹಿಸುತ್ತವೆ.

ನೆಹರು ರಾಷ್ಟ್ರೀಯ ನಗರ ನವೀಕರಣ ಮಿಷನ್, ಈ ಯೋಜನೆಯ ಒಟ್ಟು ವೆಚ್ಚ ಒಂದು ಲಕ್ಷ ಕೋಟಿ ರೂಪಾಯಿಗಳಾಗಿದ್ದು ಕೇಂದ್ರ ಮತ್ತು ರಾಜ್ಯಗಳು ಅರ್ಧರ್ಧ ಭಾಗ ವೆಚ್ಚವನ್ನು ಭರಿಸುತ್ತವೆ.

## 11. ನಗರ ಯೋಜನೆಯ ಮೂಲಾಂಶಗಳು :

ನಗರಗಳ ಅವಶ್ಯಕತೆಗಳು ಮತ್ತು ಜನಸಂಖ್ಯಾನುಸಾರ ನಗರಯೋಜನೆ ರೂಪಿಸಲ್ಪಡುತ್ತದೆ. ನಗರ ಯೋಜನೆಯೆಂದರೆ ನಗರಾವಶ್ಯಕತೆಗಳನ್ನು ಪೂರೈಸುವುದೇ ಅಲ್ಲದೆ ನಗರ ಶುಚಿತ್ವಪಾಲನೆ, ಆರೋಗ್ಯ ಮತ್ತು ನಗರ ಜೀವನವನ್ನು ಸೊಗಸುಗೊಳಿಸಲೋಸಗುವ ಕಾನೂನು ಮತ್ತು ನಿಯಮಗಳೂ ಆಗಿದೆ.

ಅದರ ಮೂಲಾಂಶಗಳು ಈ ಕೆಳಗಿನಂತೆ ಕಂಡುಬರುತ್ತವೆ :

**i) ನೆಲಬಳಕೆಯ ನಿಯಂತ್ರಣ :**

ಸೀಮಿತ ಪ್ರದೇಶದಲ್ಲಿ ಅಪರಿಮಿತ ಜನಸಂಖ್ಯೆ ಹೆಚ್ಚಿದಾಗ ನೆಲದ ಮೇಲೆ ಒತ್ತಡ ಹೆಚ್ಚುವುದಲ್ಲದೆ ಜನಸಾಂದ್ರತೆ ಹೆಚ್ಚಿ ನೆಲದ ಬೆಲೆ ಹೆಚ್ಚುತ್ತದೆ. ನೆಲದ ಅಭಾವ ಉಂಟಾಗುತ್ತದೆ. ಈ ನಿಟ್ಟಿನಲ್ಲಿ 1976ರಲ್ಲಿ ನಗರ ಭೂ (ಮಿತಿ ಹಾಗೂ ನಿರ್ಬಂಧ) ಕಾಯಿದೆಯನ್ನು ಜಾರಿಗೆ ತಂದು ನಗರದ ಕುಟುಂಬಗಳ ಭೂಮಿ ಹೊಂದುವಿಕೆಯ ಮೇಲೆ ಮಿತಿಯನ್ನು ಹೇರಿ ಇದನ್ನು ನಿಯಂತ್ರಿಸಲೋಸಗುವ ನಗರ ಯೋಜನಾ ಪ್ರಾಧಿಕಾರಗಳನ್ನು ರಚಿಸಲಾಯಿತು.

**ii) ಸಾರಿಗೆ, ಸಂಪರ್ಕ ಮಾಧ್ಯಮ ಮತ್ತು ಸಂಚಾರಿ ನಿಯಂತ್ರಣ :**

ನಗರ ಜನಸಂಖ್ಯೆ ಹೆಚ್ಚಿದಾಗ ಸಂಚಾರ ಮತ್ತು ಸಂಪರ್ಕ ಮಾಧ್ಯಮಗಳು ಹೆಚ್ಚುತ್ತವೆ. ರಸ್ತೆಗಳು, ಸಂಚಾರವಾಹನಗಳು, ಬಸ್ ನಿಲ್ದಾಣ, ದೂರವಾಣಿ ಲೈನುಗಳು ನಿಯಂತ್ರಣ ಹೆಚ್ಚುತ್ತವೆ. ಸಂಚಾರದಟ್ಟಣೆ ಹೆಚ್ಚುತ್ತದೆ. ರಸ್ತೆಗಳನ್ನು ಅಗಲ ಮಾಡುವುದು, ಪಾದಚಾರಿ ಮಾರ್ಗಗಳ ನಿರ್ಮಾಣ, ಏಕಮುಖ ಸಂಚಾರ, ಮೇಲು ಸೇತುವೆ, ಪಾರ್ಕಿಂಗ್ ವ್ಯವಸ್ಥೆ, ವರ್ತುಲ ರಸ್ತೆ ನಿರ್ಮಾಣ ಮುಂತಾದ ವ್ಯವಸ್ಥೆಗಳನ್ನು ನಗರ ಯೋಜನೆಯಲ್ಲಿ ರೂಪಿಸಲಾಗುವುದು.

**iii) ವಾಸಸ್ಥಾನ ವಲಯಾಭಿವೃದ್ಧಿ ಮತ್ತು ವಸತಿ ಯೋಜನೆ :**

ನಗರಗಳಲ್ಲಿ ಜನಸಂಖ್ಯೆ ಹೆಚ್ಚಳದಿಂದಾಗಿ ವಸತಿ ಸಮಸ್ಯೆ ಉದ್ಭವಿಸಿ ಕೊಳಚೆ ಪ್ರದೇಶಗಳು ಮತ್ತು ಅಕ್ರಮ ಕಟ್ಟಗಳ ನಿರ್ಮಾಣ, ಭೂ ಒತ್ತುವರಿ, ನೆಲ ಮತ್ತು

ಮನೆಗಳ ಬಾಡಿಗೆ ಹೆಚ್ಚಿ ವಸತಿ ಸಮಸ್ಯೆ ಉಂಟಾಗಿದೆ. ವಸತಿ ಹೀನರಿಗೆ ವಸತಿಗಳನ್ನು ಒದಗಿಸಲು ವಸತಿ ವಲಯಗಳ ನಿರ್ಮಾಣವು ನಗರ ಯೋಜನೆಯ ಒಂದು ಮುಖ್ಯಾಂಶ.

**iv) ಕಸ ಹೊರ ಹಾಕುವುದು :**

ನಗರಗಳು ಜನಸಂದಣಿ ಮತ್ತು ವಾಹನದಟ್ಟಣೆಯಿಂದಾಗಿ ಕಸದ ತೊಟ್ಟಿಗಳಾಗಿವೆ. ಇದರಿಂದಾಗಿ ಕೊಳುಕುಂಟಾಗಿ ರೋಗಗಳು ಹರಡಿ ಪರಿಸರ ಮಾಲೀನ್ಯ ಏರ್ಪಡುತ್ತದೆ. ನಾಗರಿಕರಿಗೆ ನೈರ್ಮಲ್ಯ ಮತ್ತು ಸಭ್ಯ ಜೀವನವಕಾಶವನ್ನು ಕಲ್ಪಿಸಲು ಮತ್ತು ನಗರಗಳನ್ನು ಶುಚಿಯಾಗಿಡಲು ನಗರ ಯೋಜನೆಯಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗುತ್ತದೆ.

**v) ವಲಯ ನಿರ್ಮಾಣ :**

ನಗರಗಳನ್ನು ಶುಚಿಯಾಗಿಡಲು, ಜನಸಾಂಧ್ರತೆಯನ್ನು ಸಮತೋಲನ ಗೊಳಿಸಲು ಮತ್ತು ಕಾರ್ಯನುಸಾರ ನಾಗರಿಕರಿಗೆ ಹಂಚಿಕೆಯಾಗಲು ವಲಯಗಳ ನಿರ್ಮಾಣ ನಗರಯೋಜನೆಯ ಮತ್ತೊಂದು ಅಂಶ. **ಉದಾ:** ಕೈಗಾರಿಕಾವಲಯ, ವಾಣಿಜ್ಯವಲಯ, ಮನರಂಜನಾವಲಯ, ವಸತಿವಲಯ.

**12. ಸಮಗ್ರ ಯೋಜನೆ :**

ನಗರಗಳ ನಿರ್ದಿಷ್ಟ ಸಮಸ್ಯೆಗಳು ಮತ್ತು ಅವಶ್ಯಕತೆಗಳನ್ನು ಭವಿಷ್ಯದ ದೃಷ್ಟಿಯಿಂದ ಪರಿಗಣಿಸಿ ಪ್ರಸ್ತುತ ಹಾಗೂ ಮುಂದಿನ ಅಭಿವೃದ್ಧಿಯನ್ನು ಸಾಧಿಸಲು

ಮಾರ್ಗದರ್ಶಕವಾಗಿರುವ ಸರ್ವವ್ಯಾಪಕ ಯೋಜನೆಯೆ ಸಮಗ್ರಯೋಜನೆ. ಸಮಗ್ರ ನಗರ ಯೋಜನೆಯು 3 ಪ್ರಮುಖ ಅಂಗಗಳನ್ನು ಹೊಂದಿದೆ.

1. ನಗರ ಸುಂದರೀಕರಣ.
2. ಸಾರಿಗೆ ಮತ್ತು ಸುರಕ್ಷತೆ.
3. ನೆಲಬಳಕೆಯ ವಿಧಾನ.

## ಉದ್ದೇಶಗಳು :

ನಗರವಾಸಿಗಳಿಗೆ ಸೂಕ್ತವಾದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಯನ್ನು ಒದಗಿಸುವುದು ನಗರ ಸಮಗ್ರ ಯೋಜನೆಯ ಪ್ರಮುಖ ಉದ್ದೇಶ.

1. ಕೊಳಚೆ ಪ್ರದೇಶಳ ನಿರ್ಮೂಲನೆ.
2. ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳ ಸುಧಾರಣೆ ಮತ್ತು ಸಂಘಟನೆ.
3. ವಸತಿ ಸೌಲಭ್ಯವನ್ನು ಕಲ್ಪಿಸುವುದು.
4. ಕೈಗಾರಿಕೆಗಳು, ಉದ್ಯಾನವನ, ಶಾಲೆ, ಆಸ್ಪತ್ರೆ ಮುಂತಾದ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವುದು.
5. ರಕ್ಷಿತ ಹಾಗೂ ಶುದ್ಧ ನೀರಿನ ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ.
6. ಯುವಕರು ಮತ್ತು ಮಕ್ಕಳಿಗೆ ಮನರಂಜನಾ, ಶೈಕ್ಷಣಿಕ ಹಾಗೂ ಕ್ರೀಡಾ ಸೌಲಭ್ಯಗಳನ್ನೊದಗಿಸುವುದು.
7. ರಸ್ತೆ, ಬೀದಿದೀಪ ವ್ಯವಸ್ಥೆ.
8. ಆರೋಗ್ಯ ಮತ್ತು ನೈರ್ಮಲ್ಯ ರಕ್ಷಣೆ.
9. ಕಟ್ಟಡಗಳು, ಮಾರುಕಟ್ಟೆ, ಅಂಗಡಿ ಮಳಿಗೆ, ವಾಣಿಜ್ಯ ಸಂಕೀರ್ಣ ಪೂರೈಕೆ.
10. ವಸತಿ, ಕೈಗಾರಿಕೆ, ವಾಣಿಜ್ಯ ವಲಯ ಸ್ಥಾಪನೆ.
11. ಶಿಕ್ಷಣ, ವೈದ್ಯಕೀಯ ಮತ್ತು ಆರೋಗ್ಯ ಸೌಲಭ್ಯಗಳನ್ನುಗಿಸುವುದು.
12. ವಿವಿಧ ಇಲಾಖಾ ಸೇವಾ ಸೌಲಭ್ಯಗಳ ವಿಸ್ತರಣೆ.

## ನಗರ ಯೋಜನೆಯ ನಿಯೋಗಿಗಳು :

ನಗರ ಯೋಜನೆಯು ಕೇವಲ ಸರ್ಕಾರದ ಕ್ರಮದಿಂದ ನಡೆಯುವುದಿಲ್ಲ. ಇದರ ಯಶಸ್ಸು ವಿವಿಧ ಸರ್ಕಾರಿ ಇಲಾಖೆಗಳು, ನಗರ ಯೋಜನಾ ನಿಯೋಗಿಗಳು, ಸ್ಥಳೀಯ ಆಡಳಿತಾಂಗಗಳು ಮತ್ತು ಸ್ವಯಂ ಸೇವಾ ಸಂಘಗಳ ಸಹಭಾಗಿತ್ವದಿಂದ ಮಾತ್ರ ಸಾಧ್ಯ. ಸ್ಥಳೀಯ ಆಡಳಿತಾಂಗಗಳ ಸಹಭಾಗಿತ್ವದಿಂದ ನಗರವನ್ನು ಯೋಜಿತಗೊಳಿಸಬೇಕು ನಗರ ಯೋಜನೆಯು ಶಾಸನಾತ್ಮಕ ಮತ್ತು ತಾಂತ್ರಿಕ ಸಲಕರಣೆಗಳನ್ನು ಹೊಂದಿರಬೇಕು. ನಗರ ಯೋಜನೆಯ ನಿಯೋಗಿಗಳ ಜವಾಬ್ದಾರಿ ಇಂತಿದೆ.

1. ಹಳೆ ನಗರಗಳು ಅಥವಾ ನಗರದ ಜನಭರಿತ. ಕೇಂದ್ರೀಯ ಪ್ರದೇಶಗಳನ್ನು ವಿಕೇಂದ್ರೀಕರಿಸಬೇಕು.
2. ನಗರ ಪ್ರದೇಶವನ್ನು ವಾಸಸ್ಥಾನ, ವಾಣಿಜ್ಯ, ಕೈಗಾರಿಕ, ಮನರಂಜನಾ, ಆಡಳಿತ ಮತ್ತು ಸಾಮಾಜಿಕ-ಸಾಂಸ್ಕೃತಿಕ ವಲಯಗಳನ್ನಾಗಿ ವಿಂಗಡಿಸುತ್ತವೆ.
3. ಕಿರಿದಾದ ರಸ್ತೆ, ಬೀದಿ, ಗಲ್ಲಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅಗಲೀಕರಣಗೊಳಿಸುತ್ತವೆ. **ಉದಾ:** ಮೈಸೂರು ನಗರದ ದಿ॥ ಡಿ. ದೇವರಾಜ ಅರಸು ರಸ್ತೆ, ಮಹಾತ್ಮ ಗಾಂಧಿ ರಸ್ತೆ.
4. ರಸ್ತೆಗಳು, ಬೀದಿಗಳು, ರೈಲುಮಾರ್ಗ ಮತ್ತು ನಿಲ್ದಾಣ, ವಿಮಾನ ನಿಲ್ದಾಣ, ಬಸ್ ನಿಲ್ದಾಣಗಳು ಇವುಗಳ ನಿರ್ಮಾಣವು ಜನರ, ಸರಕುಗಳ ಮತ್ತು ಸೇವೆಗಳ ಸುಲಲಿತ ಚಲನೆಗೆ ಅವಕಾಶವಾಗುವಂತೆ ಏರ್ಪಡುತ್ತದೆ.
5. ನೀರು ಸರಬರಾಜು, ಒಳಚರಂಡಿ, ವಿದ್ಯುಚ್ಛಕ್ತಿ, ದೀಪ, ಮುಂತಾದ ನಾಗರಿಕ ಸೌಲಭ್ಯಗಳನ್ನು ಒದಗಿಸುತ್ತವೆ.
6. ಮನರಂಜನಾ ಕೇಂದ್ರಗಳು – ಚಲನ ಚಿತ್ರ ಮಂದಿರಗಳು, ರಂಗಮಂಟಪಗಳು, ಕಲಾ ಮದಿರಗಳು, ವಸ್ತು ಸಂಗ್ರಹಾಲಯಗಳು, ವಸ್ತು ಪ್ರದರ್ಶನಗಳು,

ಬಯಲು ಮಂಟಪಗಳು, ಉದ್ಯಾನವನಗಳು, ಕಟ್ಟಡಗಳು ಆಟದ ಮೈದಾನಗಳು ಮುಂತಾದುವನ್ನು ಸ್ಥಾಪಿಸುತ್ತವೆ.

7. ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾನಿಲಯಗಳು, ಆಸ್ಪತ್ರೆಗಳು, ಗ್ರಂಥಾಲಯಗಳು, ಸಾಂಸ್ಕೃತಿಕ ಕೇಂದ್ರಗಳು ಮುಂತಾದುವನ್ನು ಸ್ಥಾಪಿಸುತ್ತವೆ.
8. ಯೋಜನಾ ಬದ್ಧವಾಗಿ ಬಡಾವಣೆಗಳನ್ನು ನಿರ್ಮಿಸಿ ನಿವೇಶನ, ಮನೆಗಳನ್ನು ಕಟ್ಟಿ ಅರ್ಹರಿಗೆ ಹಂಚುತ್ತವೆ.

## 1.11 ಅಧ್ಯಯನದ ಗುರಿ – ಉದ್ದೇಶಗಳು :

**ಗುರಿಗಳು :**

1. ಕೊಳಗೇರಿ ನಿವಾಸಿಗಳು ಬಡತನರೇಖೆಗಿಂತ ಕೆಳಗಿನವಾಗಿರುತ್ತಾರೆ ಎಂಬುವುದು ತಿಳಿಯುವುದಾಗಿದೆ.
2. ಗ್ರಾಮದಿಂದ ವಲಸೆ ಬಂದವರು ಈ ಕೊಳಗೇರಿ ಪ್ರದೇಶಗಳಲ್ಲಿ ಯಾಕೆ? ವಾಸ ಮಾಡುತ್ತಾರೆಂಬುವುದನ್ನು ಅಧ್ಯಯನ ಮಾಡುವುದಾಗಿದೆ.
3. ಈ ಕೊಳಗೇರಿಯ ಜನರು ವಸತಿ ಹೀನರಾಗಿರಲು ಕಾರಣ ಏನು ಎಂಬುವುದನ್ನು ತಿಳಿಯುವುದಾಗಿದೆ.
4. ಇಲ್ಲಿನ ನಿವಾಸಿಗಳು ಅನಾರೋಗ್ಯಕರ ಪರಿಸರದಲ್ಲಿ ವಾಸಿಸಲು ಕಾರಣವೇನು.
5. ಕೊಳಗೇರಿಯಲ್ಲಿ ಶಿಕ್ಷಣದ ಬಗ್ಗೆ ಕಡಿಮೆ ಒಲವು ಹೊಂದಿರಲು ಕಾರಣವೆನಿರಬಹುದೆಂದು ತಿಳಿಯುವುದು.
6. ಕೊಳಗೇರಿ ನಿವಾಸಿಗಳ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಅರಿತುಕೊಳ್ಳವುದು.
7. ಕೊಳಗೇರಿ ನಿವಾಸಿಗಳ ಸೌಲಭ್ಯಗಳ ಕೊರತೆಯನ್ನು ಅಂದರೆ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಹಾಗೂ ಇನ್ನು ಮುಂತಾದ ವ್ಯವಸ್ಥೆಗಳ ಬಗ್ಗೆ ತಿಳಿಯುವುದಾಗಿದೆ.

## ಉದ್ದೇಶಗಳು :

1. ಕೊಳಗೇರಿ ನಿರ್ಮೂಲನೆಗೆ ಸರಕಾರ ಯಾವ ರೀತಿಯ ಕಾನೂನು ಕ್ರಮ ಕೈಗೊಂಡಿದೆ ಎಂದು ತಿಳಿದುಕೊಳ್ಳುವುದು.
2. ನಗರ ಸಮಸ್ಯೆಗಳಲ್ಲಿ ಕೊಳಚೆ ಪ್ರದೇಶವು ಒಂದು ಪ್ರಮುಖ ಸಮಸ್ಯೆಯಾಗಿದೆ ಇದರ ಪ್ರಮುಖ ಉದ್ದೇಶ.
3. ಕೊಳಗೇರಿ ನಿವಾಸಿಗಳು ಕಲುಷಿತವಾದ ವಾತಾವರಣವನ್ನು ಸೃಷ್ಟಿ ಮಾಡಬಾರದೆಂಬ ಉದ್ದೇಶವನ್ನು ಹೊಂದಿರುತ್ತದೆ.
4. ಈ ಪ್ರದೇಶದಲ್ಲಿ ಜನರು ಅನಕ್ಷರಸ್ಥರಾಗಿರುವದರಿಂದ ಸರಕಾರ ಇದರ ಬಗ್ಗೆ ಯಾವ ಯೋಜನೆಗಳನ್ನು ಹಾಕಿಕೊಂಡಿದೆ.
5. ಇಲ್ಲಿನ ಜನರಲ್ಲಿ ಅನೈತಿಕವಾದ ವಾತಾವರಣದಿಂದ ಕೊಡಿರುತ್ತದೆ. ಇದರ ಬಗ್ಗೆ ಸ್ಥಳಿಯ ಸರಕಾರ ಅದರ ನಿಯಂತ್ರಣಕ್ಕೆ ಯಾವ ಕ್ರಮುವನ್ನು ಕೈಗೊಂಡಿದೆ
6. ಕೊಳಗೇರಿ ಪ್ರದೇಶದಲ್ಲಿ ಅಪರಾಧಗಳ ಕೂಪಗಳಾಗಿರುತ್ತವೆ ಇದನ್ನು ನಿಯಂತ್ರಿಸಲು ಸರಕಾರವು ಯಾವ ರೀತಿಂಯಾದ ಕಾನೂನುಗಳು ಜಾರಿಗೊಳಿಸಿದೆ ಎಂಬುವುದನ್ನು ತಿಳಿದುಕೊಳ್ಳುವುದು ಇದರ ಪ್ರಮುಖ ಉದ್ದೇಶವಾಗಿದೆ.
7. ಸರಕಾರವು ಈ ಜನರಿಗೆ ಆರೋಗ್ಯದ ಯಾವ-ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂಬುವುದು ತಿಳಿದುಕೊಳ್ಳುವುದೆ ಇದರ ಪ್ರಮುಖವಾದ ಉದ್ದೇಶ.
8. ಇತ್ತಿಚಿಗೆ ಸರಕಾರ ಹೊರಡಿಸಿರುವ ಕಾನೂನುಗಳಿಂದ ಇಲ್ಲಿನ ಜನರಿಗೆ ಎಷ್ಟು ಪ್ರಮಾಣದಲ್ಲಿ ಸಹಕಾರಿಯಾಗಿದೆ ಎಂಬುವುದು.
9. ಸರಕಾರದ ವಸತಿ ಮತ್ತು ನಗರಾಭಿವೃದ್ಧಿ ನಿಗಮ-HUDCO ಯೋಜನೆಯು ಜನರಿಗೆ ಎಷ್ಟೊಂದು ಫಲದಾಯಕವಾಗಿದೆ ಎನ್ನುವುದನ್ನು ಅರಿಯುವ ಉದ್ದೇಶವಾಗಿದೆ.
10. HDFC – ಯೋಜನೆಯು ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿಗಳಿಗೆ ರಾಜ್ಯ ಸರ್ಕಾರಗಳ ಮೂಲಕ ಸಾಲ ಸೌಲಭ್ಯವನ್ನು ಒದಗಿಸುವುದರ ಬಗ್ಗೆ ಮಾಹಿತಿಯನ್ನು ತಿಳಿಯುವುಗೋಸ್ಕರ.
11. ಸ್ಥಳಿಯ ಸರ್ಕಾರಗಳು ನಗರ ಯೋಜನೆಯು ಯಾವ ರೀತಿಯಿಂದ ಕೊಡಿರುತ್ತವೆ ತಿಳಿದುಕೊಳ್ಳುವ ಇದರ ಪ್ರಮುಖ್ಯವಾದ ಉದ್ದೇಶ.

## ಸಾಹಿತ್ಯ ಅವಲೋಕನ

### 3.1 ಪೀಠಿಕೆ :

ನಗರೀಕರಣದಿಂದ ಉಂಟಾಗುವ ಕೊಳಚೆ ಪ್ರದೇಶಗಳು ಅಥವಾ ಕೊಳಗೇರಿಗಳು ಅಥವಾ ಕೊಂಪೆಗಳು ಅಥವಾ ಸ್ಲಂ ಗಳನ್ನು ನಾಗರಿಕತೆಯ ಕಪ್ಪು ಕಲೆಗಳು ಎನ್ನಬಹುದಾಗಿದೆ. ಕೊಳಚೆ ಪ್ರದೇಶವು ಇತ್ತೀಚಿನ ಸಾರ್ವತ್ರಿಕ ಸಾಮಾಜಿಕ ಸಮಸ್ಯೆಯಾಗಿದೆ. ಕೈಗಾರಿಕೀಕರಣ, ನಗರೀಕರಣದ, ಜಾತಿ ರಾಜಕಾರಣದ ಫಲವಾಗಿ ಹುಟ್ಟಿದ ಪಾಪದ ಶಿಶುವೇ ಕೊಳಚೆ ಪ್ರದೇಶ. ಕೊಳಚೆ ಪ್ರದೇಶಗಳು ಎಂದರೆ ಮುಖದ ಅಂದಕ್ಕೆ ದೃಷ್ಟಿತಾಗದಂತೆ ದೃಷ್ಟಿ ಬೊಟ್ಟು ಎಂಬಂತೆ ಕಪ್ಪು ಚುಕ್ಕೆಯನ್ನು ಇಡುವಂತೆ ಅಂದ ಚಂದದ ಬೃಹತ್ ನಗರಗಳಲ್ಲಿ ಅಲ್ಲಲ್ಲಿ ಅಸ್ತಿತ್ವದಲ್ಲಿರುವುದನ್ನು ವ್ಯಾಪಕವಾಗಿ ಕಾಣಬಹುದಾಗಿದೆ. ನಗರಗಳು ಹೊರನೋಟಕ್ಕೆ ಸುಂದರವಾಗಿ ಕಂಡರೂ ಒಳನೋಟಕ್ಕೆ ಸಮಸ್ಯಾಪೂರಕವಾಗಿವೆ. ನಗರಗಳು ರೋಗಗ್ರಸ್ಥ ಸಮುದಾಯ, ಅಸಹಜ ಜೀವನ ಮತ್ತು ಅಪವರ್ತನ ಪ್ರಧಾನ ಪ್ರದೇಶಗಳೆಂಬ ದೃಢ ಅಭಿಪ್ರಾಯವಿದೆ. ಇವು ಸಮಸ್ಯೆಗಳ ಕೂಪ ಮತ್ತು ವಿಘಟಿತ ಸಮುದಾಯವಾಗಿವೆ. ಈ ಅಭಿಪ್ರಾಯ ಸಂಪೂರ್ಣ ಸತ್ಯವಲ್ಲದಿದ್ದರೂ ಪೂರ್ಣ ಅಸತ್ಯವಂತೂ ಅಲ್ಲ. ಸಮಸ್ಯೆಗಳು ಚಿಕ್ಕ ನಗರಗಳಲ್ಲಿ ಕಡಿಮೆಯಿದ್ದು ದೊಡ್ಡ ನಗರಗಳಲ್ಲಿ ಹೆಚ್ಚಾಗಿದೆ. ಕೊಳಚೆ ಪ್ರದೇಶದ ಸಮಸ್ಯೆಯು ವಿಶ್ವದ ಪ್ರಮುಖ ನಾಗರಿಕ ಸಮಸ್ಯೆಯಾಗಿ ಕಂಡುಬರುತ್ತಿದೆ. ಜನಸಂದಣಿ, ವಲಸೆ, ವಸತಿಯು

ಅಭಾವ, ನಿರುದ್ಯೋಗ, ರೋಗರುಜಿನ, ಕಲುಷಿತ ವಾತಾವರಣ, ನೀರಿನ ಸಮಸ್ಯೆ, ಅಪರಾಧ, ಬಾಲಾಪರಾಧ, ವೇಶ್ಯಾವೃತ್ತಿ ಹೀಗೆ ನಗರಗಳಲ್ಲಿ ಅನೇಕ ಸಮಸ್ಯೆಗಳಿವೆ.

ನಮ್ಮ ನಗರಗಳು ಜನಭರಿತವಾಗಿವೆ. ಆ ಬಗೆಯ ಹೆಚ್ಚಿನ ಜನಸಾಂದ್ರತೆಗೆ ಅಲ್ಲಿ ಹುಟ್ಟಿ ಬೆಳೆದ ಜನಸಂಖ್ಯೆಯು ಕಾರಣವಾಗಿರದೆ ಇತರ ಗ್ರಾಮ ಹಾಗೂ ಪಟ್ಟಣ ಪ್ರದೇಶಗಳಿಂದ ವಲಸೆ ಬರುವ ಜನಸಂಖ್ಯೆಯೇ ಪ್ರಮುಖ ಕಾರಣವಾಗಿರುತ್ತದೆ. ಹಾಗೆ ದಿನಂಪ್ರತಿ ವಲಸೆ ಬರುವ ಜನರಿಗೆ ಸಾಕಷ್ಟು ಪ್ರಮಾಣದ ವಸತಿ ಏರ್ಪಾಟು, ಗೃಹನಿರ್ಮಾಣದ ಏರ್ಪಾಟು ಯಾವ ದೇಶದ ಯಾವ ನಗರದಲ್ಲಿಯೂ ಆಗುತ್ತಿಲ್ಲವೆಂದೇ ಹೇಳಬಹುದಾಗಿದೆ.

ನಗರ ಸಮಸ್ಯೆಗಳಲ್ಲೆಲ್ಲಾ ಕೊಳಚೆ ಪ್ರದೇಶವು ಒಂದು ತೀವ್ರ ಸಮಸ್ಯೆಯಾಗಿದೆ. ನ್ಯೂಯಾರ್ಕ್, ಪ್ಯಾರಿಸ್, ಲಂಡನ್, ಮ್ಯಾನಿಚ್, ಬ್ಯಾಂಕಾಕ್, ಮುಂಬಯಿ, ಕಲ್ಕತ್ತಾ ಡಾಕ್ಕ ಮುಂತಾದ ಪ್ರಗತಿ ಹೊಂದಿದ ಹಾಗೂ ಯೋಜಿತ ನಗರಗಳಲ್ಲೂ ಕೊಳಚೆ ಪ್ರದೇಶಗಳಿವೆ. ಕೈಗಾರಿಕಾ ಕೇಂದ್ರಗಳು ನಗರಗಳಾಗುತ್ತಿವೆ ಹಾಗೂ ನಗರಗಳಲ್ಲಿ ಕಾರ್ಖಾನೆಗಳು ಹೆಚ್ಚುತ್ತಿವೆ. ಸ್ತ್ರೀ–ಪುರುಷರಿಬ್ಬರ ದುಡಿಮೆಯೂ ಕಾರ್ಖಾನೆಗಳಲ್ಲಿ ಅವಶ್ಯಕ. ದಶಕದಿಂದ ದಶಕಕ್ಕೆ ಎಲ್ಲಾ ವಿಧವಾದ ದೊಡ್ಡ ಹಾಗೂ ಸಣ್ಣ ಪ್ರಮಾಣದ ಸಾವಿರಾರು ಕಾರ್ಖಾನೆಗಳು ಸ್ಥಾಪನೆಯಾಗುತ್ತಿವೆ. ಇವು ಲಕ್ಷಾಂತರ ಮಂದಿ ಕಾರ್ಮಿಕರಿಗೆ ಉದ್ಯೋಗ ದೊರಕಿಸುತ್ತಿವೆ.

## ಕೋಷ್ಟಕ – 1

### ಉದ್ಯೋಗದ / ಕಾರ್ಯದ ವಿವರ

| ಕ್ರ.ಸಂ. | ವಿವರ | ಸಂಖ್ಯೆ | ಪ್ರತಿಶತ |
|---|---|---|---|
| 1 | ಕಾರ್ಖಾನೆಯಲ್ಲಿ ಕಾರ್ಮಿಕನಾಗಿ/ಳಾಗಿ | 06 | 12 |
| 2 | ಕಟ್ಟಡ ನಿರ್ಮಾಣ ಮಾಡುವಲ್ಲಿ | 08 | 16 |
| 3 | ಚಿಂದಿಬಟ್ಟೆ ಪ್ಲಾಸ್ಟಿಕ್, ಗಾಜುಗಳು ಆಯುವದರಲ್ಲಿ | 04 | 08 |
| 4 | ವ್ಯಾಪಾರ/ಇತರೆ | 32 | 64 |
| | **ಒಟ್ಟು** | **50** | **100** |

ಕೊಳಚೆ ಪ್ರದೇಶಗಳಲ್ಲಿ ವಾಸಮಾಡುವ ಜನರು ಕಾರ್ಖಾನೆಯಲ್ಲಿ ಕಾರ್ಮಿಕನಾಗಿ/ಳಾಗಿ ಕೆಲಸ ಮಾಡುವವರ ಸಂಖ್ಯೆ 06 ಆಗಿದ್ದು ಪ್ರತಿಶತ 12 ರಷ್ಟಿದ್ದಾರೆ, ಕಟ್ಟಡ ನಿರ್ಮಾಣ ಮಾಡುವಲ್ಲಿ ಕೆಲಸ ಮಾಡುವವರ ಸಂಖ್ಯೆ 08 ಆಗಿದ್ದು ಪ್ರತಿಶತ 16 ರಷ್ಟಿದ್ದಾರೆ, ಚಿಂದಿಬಟ್ಟೆ, ಪ್ಲಾಸ್ಟಿಕ್, ಗಾಜುಗಳು ಆಯುವದರಲ್ಲಿ ಕೆಲಸ ಮಾಡುವವರ ಸಂಖ್ಯೆ 04 ಆಗಿದ್ದು ಪ್ರತಿಶತ 08 ರಷ್ಟಿದ್ದು, ವ್ಯಾಪಾರ / ಇತರೆ ಈ ಕೆಲಸ ಮಾಡುವವರ ಸಂಖ್ಯೆ 32 ಆಗಿದ್ದು ಪ್ರತಿಶತ 64 ರಷ್ಟಿದ್ದಾರೆ.

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ವ್ಯಾಪಾರ/ಇತರೆ ಕೆಲಸ ಎಂದು ಹೇಳಿದವರ ಸಂಖ್ಯೆ 32 ಆಗಿದ್ದು ಪ್ರತಿಶತ 64 ರಷ್ಟು ಎಂದು ಹೇಳಿದವರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತಾರೆ.

## ಕೋಷ್ಟಕ – 2

### ಆದಾಯದ ವಿವರ

| ಕ್ರ.ಸಂ. | ವಿವರ (ರೂ ಗಳಲ್ಲಿ) | ಸಂಖ್ಯೆ | ಪ್ರತಿಶತ |
|---|---|---|---|
| 1 | 50 | 01 | 2 |
| 2 | 100 | 22 | 44 |
| 3 | 150 | 16 | 32 |
| 4 | 200 | 11 | 22 |
| | ಒಟ್ಟು | **50** | **100** |

ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಕೆಲಸಗಾರರಿಗೆ ಅವರು ಮಾಡುವ ಕೆಲಸದಿಂದ ಅವರಿಗೆ ಬರುವ ದಿನದ ಆದಾಯ ನೋಡಿದಾಗ 50/– ರೂ. ಎಂದು ಹೇಳಿದವರ ಸಂಖ್ಯೆ 01 ಆಗಿದ್ದು, ಪ್ರತಿಶತ 2 ರಷ್ಟಿದ್ದಾರೆ, 100/– ರೂ. ಎಂದು ಹೇಳಿದವರ ಸಂಖ್ಯೆ 22 ಆಗಿದ್ದು, ಪ್ರತಿಶತ 44 ರಿಷ್ಟಿದ್ದಾರೆ, 150/– ರೂ. ಎಂದು ಹೇಳಿದವರ ಸಂಖ್ಯೆ 16 ಆಗಿದ್ದು, ಪ್ರತಿಶತ 32 ರಷ್ಟಿದ್ದಾರೆ, 200/– ರೂ. ಎಂದು ಹೇಳಿದವರ ಸಂಖ್ಯೆ 11 ಆಗಿದ್ದು ಪ್ರತಿಶತ 22 ರಷ್ಟಿದ್ದಾರೆ.

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವದೇನೆಂದರೆ, ದಿನದ ಆದಾಯ 100 ಎಂದು ಹೇಳಿದವರ ಸಂಖ್ಯೆ ಪ್ರತಿಶತ 44 ರಷ್ಟಾಗಿದ್ದು ಕಂಡು ಬರುತ್ತದೆ.

## ಕೊಷ್ಟಕ – 3

### ಮನೆಯಲ್ಲಿ ಕೆಲಸ ಮಾಡುವರ ಸದಸ್ಯರ ಸಂಖ್ಯೆಯ ವಿವರ

| ಕ್ರ.ಸಂ. | ವಿವರ | ಸಂಖ್ಯೆ | ಪ್ರತಿಶತ |
|---|---|---|---|
| 1 | ಒಬ್ಬರು | 22 | 44 |
| 2 | ಇಬ್ಬರು | 16 | 32 |
| 3 | ಮೂವರು | 08 | 16 |
| 4 | ಎಲ್ಲರು | 04 | 08 |
| | **ಒಟ್ಟು** | **50** | **100** |

ಕೊಳಚೆ ಪ್ರದೇಶಗಳಲ್ಲಿ ಒಂದು ಕುಟುಂಬದಲ್ಲಿ ಒಬ್ಬ ಸದಸ್ಯರು ಕೆಲಸ ಮಾಡುವವರ ಸಂಖ್ಯೆ 22 ಆಗಿದ್ದು ಪ್ರತಿಶತ 44 ರಷ್ಟಿದ್ದಾರೆ, ಇಬ್ಬರು ಸದಸ್ಯರು ಕೆಲಸ ಮಾಡುವವರ ಸಂಖ್ಯೆ 16 ಆಗಿದ್ದು ಪ್ರತಿಶತ 32 ರಷ್ಟುರಾಗಿದ್ದು ಮೂವರು ಸದಸ್ಯರು ಕೆಲಸ ಮಾಡುವವರ ಸಂಖ್ಯೆ 08 ಆಗಿದ್ದು ಪ್ರತಿಶತ 16 ರಷ್ಟುರಾಗಿದ್ದಾರೆ, ಕುಟುಂಬದ ಎಲ್ಲಾ ಸದಸ್ಯರು ಕೆಲಸ ಮಾಡುವವರ ಸಂಖ್ಯೆ 04 ಆಗಿದ್ದು ಪ್ರತಿಶತ 08 ರಷ್ಟಿದ್ದಾರೆ.

ಈ ಮೇಲಿನ ಕೋಷ್ಟಕದಿಂದ ತಿಳಿದುಬರುವದೇನೆಂದರೆ ಕುಟುಂಬದ ಒಬ್ಬರು ಸದಸ್ಯರು ಕೆಲಸ ಮಾಡುವವರ ಸಂಖ್ಯೆ 22 ಆಗಿದ್ದು ಪ್ರತಿಶತ 44 ರಷ್ಟಿದ್ದಾರೆ ಇವರ ಸಂಖ್ಯೆಯೆ ಹೆಚ್ಚಾಗಿ ಕಂಡುಬರುತ್ತದೆ.

## ಕೋಷ್ಟಕ – 4

### ಒಂದು ವಾರದಲ್ಲಿ ಕೆಲಸ ಮಾಡುವ ದಿನಗಳ ವಿವರ

| ಕ್ರ.ಸಂ. | ವಿವರ | ಸಂಖ್ಯೆ | ಪ್ರತಿಶತ |
|---|---|---|---|
| 1 | ನಾಲ್ಕು ದಿನ | 02 | 04 |
| 2 | ಐದು ದಿನ | 01 | 02 |
| 3 | ಆರು ದಿನ | 25 | 50 |
| 4 | ಏಳು ದಿನ | 22 | 44 |
| | **ಒಟ್ಟು** | **50** | **100** |

ಕೊಳಚೆ ಪ್ರದೇಶಗಳಲ್ಲಿನ ನಿವಾಸಿಗಳು ಒಂದು ವಾರದಲ್ಲಿ ನಾಲ್ಕು ದಿನ ಕೆಲಸ ಮಾಡುವವರ ಸಂಖ್ಯೆ 02 ರಷ್ಟು ಆಗಿದ್ದು ಪ್ರತಿಶತ 04 ರಷ್ಟುರಾಗಿದೆ, ಐದು ದಿನ ಕೆಲಸ ಮಾಡುವವರ ಸಂಖ್ಯೆ 01 ಆಗಿದ್ದು ಪ್ರತಿಶತ 02 ರಷ್ಟುರಾಗಿದದೆ, ಆರುದಿನ ಕೆಲಸ ನಿರ್ವಹಿಸುವರ ಸಂಖ್ಯೆ 25 ಆಗಿದ್ದು ಪ್ರತಿಶತ 50 ರಷ್ಟುರಾಗಿದೆ ಮತ್ತು ಏಳು ದಿನ ಕೆಲಸ ಮಾಡುವವರ ಸಂಖ್ಯೆ 22 ಆಗಿದ್ದು ಪ್ರತಿಶತ 44 ರಷ್ಟಿದ್ದಾರೆ.

ಈ ಮೇಲಿನ ಕೋಷ್ಟಕದಿಂದ ತಿಳಿದು ಬರುವದೇನೆಂದರೆ ಒಂದು ವಾರದ ಆರು ದಿನ ಕೆಲಸ ಮಾಡುವವರ ಸಂಖ್ಯೆ 25 ಆಗಿದ್ದು ಪ್ರತಿಶತ 50 ರಷ್ಟಿದ್ದಾರೆ ಎಂಬುವುದು ಕಂಡುಬರುತ್ತದೆ.

## ಕೊಷ್ಟಕ – 5

## ಆದಾಯವನ್ನು ಪಡೆದುಕೊಳ್ಳುವ ರೂಪದ ವಿವರ

| ಕ್ರ.ಸಂ. | ವಿವರ | ಸಂಖ್ಯೆ | ಪ್ರತಿಶತ |
|---|---|---|---|
| 1 | ಹಣ | 35 | 70 |
| 2 | ದವಸಗಳು / ಹಣ | 15 | 30 |
| 3 | ವಸ್ತುಗಳು | 00 | 00 |
| 4 | ಇತರೆ | 00 | 00 |
| | **ಒಟ್ಟು** | **50** | **100** |

ಈ ಪ್ರದೇಶದ ನಿವಾಸಿಗಳು ಪಡೆದುಕೊಳ್ಳುವ ಆದಾಯದ ರೂಪವು ಈ ಇಲ್ಲಿ ಕಂಡು ಬರುತ್ತದೆ. ಹಣದ ರೂಪದಲ್ಲಿ ಪಡೆದುಕೊಳ್ಳುವವರ ಸಂಖ್ಯೆ 35 ಆಗಿದ್ದು ಪ್ರತಿಶತ 70 ರಷ್ಟಾಗಿದ್ದು, ದವಸಗಳು / ಹಣವನ್ನು ಪಡೆದುಕೊಳ್ಳುವವರ ಸಂಖ್ಯೆ 15 ಆಗಿದ್ದು ಪ್ರತಿಶತ 30 ರಷ್ಟಾಗಿದೆ, ವಸ್ತುಗಳು ರೂಪದಲ್ಲಿ ಯಾರು ಪಡೆದುಕೊಳ್ಳುತ್ತಿಲ್ಲ ಮತ್ತು ಇತರೆ ವಿಭಾಗದಲ್ಲಿ ಇದೇ ರೀತಿಯಾಗಿ ಕಂಡುಬರುವುದು.

ಈ ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ ಹಣದ ರೂಪದಲ್ಲಿ ಆದಾಯವನ್ನುಪಡೆದುಕೊಳ್ಳುವರ ಸಂಖ್ಯೆ 35 ಆಗಿದ್ದು ಪ್ರತಿಶತ 70 ರಷ್ಟಿದ್ದಾರೆ ಎಂಬುದು ಕಂಡುಬರುತ್ತದೆ.

# ಆಧಾರ ಗ್ರಂಥಗಳು


1. ಸಾಮಾಜಿಕ ಸಮಸ್ಯೆಗಳು – ಎಸ್. ರಾಜಶೇಖರ್
2. ನಗರ ಸಮಾಜಶಾಸ್ತ್ರ – ಪ್ರೊ॥ ಎಂ. ನಾರಾಯಣ
3. ಸಮಗ್ರ ಸಮಾಜಶಾಸ್ತ್ರ – ರಾಮಚಂದ್ರ ಜೋಷಿ
4. ನಗರದ ಸಮಾಜಶಾಸ್ತ್ರ – ಪ್ರೊ॥ ಕೆ. ಭೈರಪ್ಪ
5. ಸಮಗ್ರ ಸಾಮಾಜಿಕ ಸಮಸ್ಯೆಗಳು – ಕೆ. ಭೈರಪ್ಪ
6. ಸ್ಲಂ ಜನಾಂದೋಲನ – ಕರ್ನಾಟಕ ನಗರ ವಂಚಿತ ಸಮುದಾಯಗಳ ವೇದಿಕೆ.
7. ರಾಜ್ಯದ ಕೊಳಗೇರಿಗಳ ಒಂದು ಒಳನೋಟ
8. ಭಾರತೀಯ ಸಾಮಾಜಿಕ ಸಮಸ್ಯೆಗಳು – ಚ.ನ. ಶಂಕರ್ ರಾವ್
9. ಉದಯವಾಣಿ, ಪ್ರಜಾವಾಣಿ ದಿನ ಪತ್ರಿಕೆಗಳು
10. ಇಂಟರ್ ನೆಟ್‌ಗಳಿಂದ ಮಾಹಿತಿ.

A

PROJECT REPORT ON

# "ಗ್ರಾಮೀಣ ಪ್ರದೇಶಗಳಲ್ಲಿನ ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳ ಕಲಿಕೆಯ ಮಾನಸಿಕ ಸ್ಥಿತಿಗತಿಗಳ ಕುರಿತು ಸಮಾಜಶಾಸ್ತ್ರೀಯ ಅಧ್ಯಯನ"

*Submitted to the*

H.K.E. Society's

**A V PATIL ARTS SCIENCE & COMMERCE COLLEGE ALAND"**

**Submitted By**


1. Shankar Mallinath
2. Sudhakar Revansiddappa
3. Suvarna Sharanappa
4. Shrinivas Revansidda
5. Sachin Abhimanyu


*Under the guidance of*


**Prof. Sangamesh N. Swami**

**Department of Sociology**
**A V Patil Arts, Science & Commerce College Aland"**


**2021-22**

ESDT: 1980

STD: 08477 Ph: 202421

Hyderabad Karnataka Education Society's

A.V. Patil Degree College of Arts, Science & Commerce

Vidya Nagar, ALAND -585302 - Dist: Kalburagi ,Karnataka

Web: www.hkesociety.org/avpdc -E-mail: avpatilaland@gmail.com

UGC COLLEGE CODE NO. KAGU 002 –Fax: 08477 -202421 NAAC Accredited "B"+ Grade

Ref: No. HKES/ AVPDC/PT/2021-22

Date: 11/04/2021

# CERTIFICATE OF COMPLETION

This is to certify that the Project Report "ಗ್ರಾಮೀಣ ಪ್ರದೇಶಗಳಲ್ಲಿನ ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳ ಕಲಿಕೆಯ ಮಾನಸಿಕ ಸ್ಥಿತಿಗತಿಗಳ ಕುರಿತು ಸಮಾಜಶಾಸ್ತ್ರೀಯ ಅಧ್ಯಯನ" AT HKES'S A V PATIL ARTS SCIENCE & COMMERCE COLLEGE ALAND " is based on the project carried out under the guidance of Prof. Sangamesh N Swami and submitted to the Department of Sociology H.K.E. Society's A V Patil Arts, Science & Commerce College Aland.

SUBMITTED BY :

1. Shankar Mallinath
2. Sudhakar Revansiddappa
3. Suvarna Sharanappa
4. Shrinivas Revansidda
5. Sachin Abhimanyu

GUIDE

HOD
Head
Dept. of Sociology
H.K.E.S's A.V. Patil Degree College

PRINCIPAL
PRINCIPAL
H. K. E. SOCIETY'S
A.V. Patil Degree College,
ALAND

DATE: 11/04/2021

PLACE : ALAND

ESDT: 1980 STD: 08477 Ph: 202421

Hyderabad Karnataka Education Society's

**A.V. Patil Degree College of Arts, Science & Commerce**

Vidya Nagar, ALAND -585302 - Dist: Kalburagi ,Karnataka

Web: www.hkesociety.org/avpdc -E-mail: avpatilaland@gmail.com

UGC COLLEGE CODE NO. KAGU 002 -Fax: 08477 -202421 NAAC Accredited "B"+ Grade

Ref: No. HKES/ AVPDC/PT/2021-22 Date: 11/04/2021

# ACKNOWLEDGEMENTS

It is my pleasure to express my sincere gratitude to all those who have given guidance and support in completion of this dissertation report. I wish to express my sincere thanks to Prof. Sangamesh N. Swami Head of Department of Sociology for his encouragement which helped in accomplishment of this study.

I wish to express my sincere heartfelt gratitude to Prof. Sangamesh N Swami department of Sociology for the constant guidance and support in all areas. Without her guidance the outcome of this report would not have been so successful.

# ಅಧ್ಯಾಯ - 1

1.1 ಪೀಠಿಕೆ

1.2 ಅರ್ಥ

1.3 ವ್ಯಾಖ್ಯಾನಗಳು

1.4 ಕಲಿಕೆಯ ಮಹತ್ವ

1.5 ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು

1.6 ಶಿಕ್ಷಣದ ಅರ್ಥ

1.7 ಶಿಕ್ಷಣದ ವ್ಯಾಖ್ಯೆಗಳು

1.8 ಶಿಕ್ಷಣದ ಸ್ವರೂಪ

1.9 ಐತಿಹಾಸಿಕ ಹಿನ್ನಲೆ

1.10 ಪ್ರಾಚೀನ ಕಾಲದಲ್ಲಿ ಶಿಕ್ಷಣ

1.11 ಮುಸ್ಲಿಂ ಕಾಲದಲ್ಲಿ ಶಿಕ್ಷಣ

1.12 ವುಡನ್ ವರದಿಯ ಪ್ರಮುಖ ಶಿಫಾರಸುಗಳು

1.13 ಭಾರತೀಯ ಶಿಕ್ಷಣ ಆಯೋಗ - 1883

1.14 ಸಮಸ್ಯೆಯ ಕುರಿತಾದ ಹೇಳಿಕೆ

1.15 ಅಧ್ಯಯನದ ಗುರಿ ಮತ್ತು ಉದ್ದೇಶಗಳು

# ಅಧ್ಯಾಯ – 1

## 1.1 ಪೀಠಿಕೆ :

ಕಲಿಕೆ ಎಂಬುದು ಮಾನವನ ಹುಟ್ಟಿನಿಂದ ಸಾವಿನವರೆಗೂ ಕಲಿತು ಅರ್ಥೈಸಿಕೊಳ್ಳುವ ಒಂದು ಪರಕ್ರಿಯೆಯಾಗಿದೆ. ಮಕ್ಕಳಲ್ಲಿ ಕಂಡು ಬರುವ ಓದು ಬರಹ, ಲೆಕ್ಕಾಚಾರಗಳೇ ಕಲಿಕೆ ಎನ್ನುವುದು. ಮನೋವಿಜ್ಞಾನದ ಪ್ರಕಾರ ಸಂಕುಚಿತ ಅರ್ಥ ನೀಡುತ್ತದೆ. ಮುಂದೆ ಎದುರಾಗುವ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಎದುರಿಸುವಂತೆ ಮೂಲ ವರ್ತನೆಗಳನ್ನು ಅನುಭವಗಳ ಮೂಲಕ ಮಾರ್ಪಡಿಸುವುದೇ ಶಿಕ್ಷಣ. ಈ ಕಿರು ಪ್ರಬಂಧವು ವಿದ್ಯಾರ್ಥಿಗಳ ಕಲಿಕೆಯ ಕುರಿತು, ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಗತಿ, ವಿಷಯಗಳ ಕುರಿತು ಆಸಕ್ತಿಯ ಅಭಿಪ್ರಾಯಗಳ ಕುರಿತು ತಿಳಿಯುವುದಾಗಿದೆ.

ಭಾರತದಲ್ಲಿ ಒಟ್ಟು 13 ಮಿಲಿಯನ್ ಪ್ರೌಢಶಾಲೆಗಳಿವೆ. ಕಲಬುರಗಿ ಜಿಲ್ಲೆಯ ಮಹಾಗಾಂವ ಗ್ರಾಮದಲ್ಲಿ 4 ಪ್ರೌಢಶಾಲೆಗಳಿವೆ. ಇದರಲ್ಲಿ 1 ಸರ್ಕಾರಿ ಪ್ರೌಢಶಾಲೆ, 2 ಅನುದಾನಿತ ಶಾಲೆ, 1 ಅನುದಾನ ರಹಿತ ಶಾಲೆಗಳಿವೆ. ನನ್ನ ಈ ಅಧ್ಯಯನಕ್ಕೆ 8 ರಿಂದ 10 ನೇ ತರಗತಿಯ ಮಕ್ಕಳನ್ನು ತೆಗೆದುಕೊಂಡಿದ್ದೇನೆ.

## 1.2 ಅರ್ಥ :

**ಕಲಿಕೆ :** ಕಲಿಕೆ ಎಂದರೆ ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆಗಳು ತರುವುದೇ ಆಗಿದೆ. ಮಾನವನು ತಮ್ಮ ಜೀವನಪೂರ್ತಿ ಅನೇಕ ಬದಲಾವಣೆಗಳನ್ನು ಹೊಂದುತ್ತಿರುತ್ತಾರೆ. ಮಾನವನಿಗೆ ಕಲಿಕೆ ಅನಿವಾರ್ಯ ಹಾಗೂ ಅಗತ್ಯ

ಅವನ ಭವಿಷ್ಯ ಅವನು ರೂಪಿಸಿಕೊಳ್ಳುವುದು ನಾನಾ ಬಗೆಯ ಕಲಿಕೆಯ ಮೇಲೆಯೇ ಅವಲಂಬಿಸಿರುತ್ತದೆ.

**ವಿದ್ಯಾರ್ಥಿ:** "ಒಬ್ಬ ವ್ಯಕ್ತಿ ಯಾವುದೇ ಒಂದು ಶೈಕ್ಷಣಿಕ ಸಂಸ್ಥೆಯಲ್ಲಿ, ವಿಶ್ವವಿದ್ಯಾಲಯದಲ್ಲಿ ಅಥವಾ ಕಲಿಕಾ ಕೇಂದ್ರಗಳಲ್ಲಿ ಕಲಿಯುತ್ತಿದ್ದರೆ ಅವನನ್ನು/ ಅವಳನ್ನು "ವಿದ್ಯಾರ್ಥಿ" ಎಂದು ಕರೆಯುತ್ತಾರೆ.

## 1.3 ವ್ಯಾಖ್ಯಾನಗಳು :

1) **ಗೇಟ್ಸರವರ ಪ್ರಕಾರ :** "ಅನುಭವಗಳಿಂದ ಉಂಟಾಗುವ ಬದಲಾವಣೆಯೇ ಕಲಿಕೆ"

2) **ಬ್ಲೇಕ್ ಮತ್ತು ಸಿಂಪ್ಸನ್‌ರವರ ಪ್ರಕಾರ :** "ಒಬ್ಬ ವ್ಯಕ್ತಿಯ ವರ್ತನೆ, ಒಳನೋಟ, ಆಸಕ್ತಿ, ಚಿಂತನೆ ಇವುಗಳಲ್ಲಿ ಉಂಟಾಗುವ ಬದಲಾವಣೆಯೇ ಕಲಿಕೆ"

3) **ವುಡ್‌ರಫ್ :** "ವರ್ತನಾ ಸಂಘಟನೆಯಲ್ಲಾಗುವ ಬದಲಾವಣೆಯೇ ಕಲಿಕೆ"

4) **ಕ್ಯಾನ್‌ಬ್ಯಾಕ್ :** "ತರಬೇತಿ ಮತ್ತು ಅಭ್ಯಾಸಗಳ ಮೂಲಕ ವರ್ತನೆಯ ಉಗಮ ಮತ್ತು ಮಾರ್ಪಾಡನ್ನು ಉಂಟುಮಾಡುವ ಪ್ರಕ್ರಿಯೆಯೇ ಕಲಿಕೆ" ಎಂದು ಹೇಳಿದ್ದಾರೆ.

5) **ಬಿಂಗ್ ಹ್ಯಾಮ್ :** "ಪ್ರಯತ್ನ ಮತ್ತು ಅನುಭವದ ಪರಿಣಾಮವಾಗಿ ಉಂಟಾಗುವ ಶಾಸ್ವತ ಬದಲಾವಣೆಯೇ ಕಲಿಕೆ".

## 1.4 ಕಲಿಕೆಯ ಮಹತ್ವ :

- ಕಲಿಕೆಯ ವರ್ತನೆಯ ನಿರಂತರ ಬದಲಾವಣೆ ಜೀವನಪೂರ್ತಿ ಅದು ನಡೆಯುತ್ತಲೇ ಇರುತ್ತದೆ.
- ಕಲಿಕೆ ವ್ಯಾಪಕವಾದರೂ, ಅವು ಜೀವನದ ಎಲ್ಲಾ ಪ್ರಕಾರಗಳಿಗೂ ಸಂಬಂಧಿಸಿರುವುದು.

- ಅದು ವ್ಯಕ್ತಿಯ ಬೌದ್ಧಿಕ, ಸಾಮಾಜಿಕ ಹಾಗೂ ಸಂವೇದನಾತ್ಮಕ ವಲಯಗಳಿಗೆ ಸಂಬಂಧಿಸಿರುವುದು.

- ವರ್ತನೆಯ ಸರಿಯಾದ ರೂಪವೇ ಕಲಿಕೆ.

- ಕಲಿಕೆ ವಿಕಾಸಾತ್ಮಕ

- ಕಲಿಕೆ ಯಾವಾಗಲೂ ಗುರಿಗಳಿಗೆ ಸಂಬಂಧಿಸಿರುತ್ತದೆ. ಈ ಗುರಿಗಳನ್ನು ವೀಕ್ಷಣಾ ಸಾಧ್ಯವಾದ ವರ್ತನೆಗಳನ್ನಾಗಿ ನಿರೂಪಿಸಬಹುದು.

- ಕಲಿಕೆಗೂ ಆಸಕ್ತಿಗಳಿಗೂ ನಿಕಟವಾದ ಸಂಬಂಧವಿದೆ. ವ್ಯಕ್ತಿ ಅವನಿಗೆ ಆಸಕ್ತಿ ಇರುವ ವಿಷಯಗಳನ್ನು ಬೇಕ ಕಲಿಯುತ್ತಾನೆ.

- ಕಲಿಕೆಯ ಸಿದ್ದತೆ ಮತ್ತು ಪ್ರೇರಣೆಯನ್ನು ಅವಲಂಬಿಸಿರುತ್ತದೆ.

## 1.5 ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು :

➢ **ಅಭಿಪ್ರೇರಣೆ (Motivation) :**

ಅಭಿಪ್ರೇರಣೆಯೆಂದರೆ ವ್ಯಕ್ತಿಯನ್ನು ಕಾರ್ಯೋನ್ಮುಖನನ್ನಾಗಿ ಅಥವಾ ಕ್ರೀಯಾಶೀಲರನ್ನಾಗಿ ಮಾಡುವಂತ ಪ್ರಕ್ರಿಯೆಯಾಗಿದೆ.

- **ಮಾಸ್ಲೋರವರ ಪ್ರಕಾರ** : ಅಭಿಪ್ರೇರಣೆ ಎನ್ನುವುದು ನಿರಂತರ, ಚಲನಶೀಲ ಹಾಗೂ ಸಂಕೀರ್ಣ ಪ್ರಕ್ರಿಯೆಯಾಗಿದೆ ಮತ್ತು ಇದು ಪ್ರತಿಯೊಂದು ಜೀವಿಯಲ್ಲಿಯೂ ಕಂಡು ಬರುವ ಒಂದು ಸಾಮಾನ್ಯ ಲಕ್ಷಣವಾಗಿದೆ.

- **ಸ್ಕಿನ್ನರರವರ ಪ್ರಕಾರ** : ಶಾಲಾ ಕಲಿಕೆಯಲ್ಲಿ ಅಭಿಪ್ರೇರಣೆ ಅಪೇಕ್ಷಿತ ವರ್ತನೆಯನ್ನು ಹುರಿದುಂಬಿಸುವ, ಪೋಷಿಸುವ ಮತ್ತು ನಿರ್ದೇಶಿಸುವುದನ್ನು ಒಳಗೊಳ್ಳುತ್ತದೆ.

➢ **ಅವಧಾನ (Alternation) :**

ಕಲಿಯುವ ವ್ಯಕ್ತಿ ಕಲಿಯುವ ವಸ್ತುವಿನ ಪ್ರೀತಿ ಕೇಂದ್ರೀಕೃತವಾದರೆ ಮಾತ್ರ ಕಲಿಕೆ ಸಾಧ್ಯವಾಗುತ್ತದೆ. ಹೀಗೆ ನಿರ್ಧಿಷ್ಟ ವಸ್ತುವಿನ ಕಡೆಗೆ ಗಮನ ಕೇಂದ್ರೀಕರಿಸುವಿಕೆಯನ್ನು "ಅವಧಾನ" ಎಂದು ಕರೆಯುತ್ತಾರೆ.

- **ಜೇಮ್ಸ ಡಾಸ್‌ರವರ ಪ್ರಕಾರ** : "ಆಲೋಚನೆಯಲ್ಲಿ ಬರುವ ವಸ್ತುವನ್ನು ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡಿಸುವ ವಿಧಾನವೇ ಅವಧಾನ"

➢ **ಸ್ಮೃತಿ ಮತ್ತು ವಿಸ್ಮೃತಿ (Memory & Forgetting) :**

**ಸ್ಮೃತಿ :** ಕಲಿಕೆ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳುವುದೇ ಸ್ಮೃತಿ. ಇದು ಬುದ್ದಿವಂತ ವರ್ತನೆಯ ಅಗತ್ಯ ಅಂಶವಾಗಿದೆ. ಸ್ಮೃತಿ ಇಲ್ಲದೇ ನಾವು ಏನೂ ಕಲಿಯಲು ಸಾಧ್ಯವಿಲ್ಲ. ಕಲಿತುದುದನ್ನು ಧಾರಣೆ ಮಾಡಿಕೊಳ್ಳುವುದಕ್ಕೆ ಸ್ಮೃತಿ ಎಂದು ಕರೆಯುವರು.

**ವಿಸ್ಮೃತಿ :** ಕಲಿತ ವಿಷಯವನ್ನು ಅಗತ್ಯವಾದಾಗ ನೆನಪಿಗೆ ತಂದುಕೊಳ್ಳುವಲ್ಲಿನ ಅಸಮರ್ಥನೆಯನ್ನು ವಿಸ್ಮೃತಿ ಎಂದು ಕರೆಯುತ್ತಾರೆ. ಕಲಿತ ವಿದ್ಯೆಯನ್ನು ಮನಸ್ಸಿನಲ್ಲಿ ಧಾರಣೆಯಾಗದೇ ಕಳೆದುಹೋಗುವುದನ್ನು ವಿಸ್ಮೃತಿ/ಮರೆವು ಎಂದು ಕರೆಯುತ್ತಾರೆ.

➢ **ಕಲಿಕೆಯ ವಿಧಗಳು :** ಮನೋವಿಜ್ಞಾನಿಗಳು ತಾವು ಅಧ್ಯಯನಗಳ ಆಧಾರದ ಮೇಲೆ ಕಲಿಕೆಯ ಹಲವಾರು ವಿಧಗಳನ್ನು ನಿರೂಪಿಸಿರುತ್ತಾರೆ. ಕಲಿಕೆಯನ್ನು ನಿರ್ಧಿಷ್ಟ ವಿಧಾನಗಳಿಗೆ ವರ್ಗೀಕರಿಸುವುದು ತುಂಬಾ ಕಷ್ಟ ಹಾಗೂ ನಾವು ಅವುಗಳನ್ನು ಹೇಗೆ ವರ್ಗೀಕರಿಸಿದರೂ ಸಹ ಒಂದಕ್ಕೊಂದು ಸಂಬಂಧಹೊಂದಿರುತ್ತವೆ. ಆದರೂ ರಾಬರ್ಟ ಎಂ. ಗ್ಯಾಸಿಯವರು ವರ್ಗೀಕೃತ ಶ್ರೇಣಿಯ ರೂಪದಲ್ಲಿ ಅವು ಈ ಮುಂದಿನಂತಿವೆ.

- ✓ ಸಂಜ್ಞಾ ಕಲಿಕೆ (Sign learning)
- ✓ ಉದ್ದೀಪನ – ಅನುಕ್ರೀಯೆ ಕಲಿಕೆ (ಕ್ರೀಯಾಜನ್ಯ ಅನುಬಂಧನ ಕಲಿಕೆ) (Stimulry response learning)
- ✓ ಸರಣಿ ಕಲಿಕೆ (Manner learning)
- ✓ ಶಾಬ್ದೀಕ ಸಹಚರ್ಯ ಕಲಿಕೆ (Verbal collection)
- ✓ ವಿಭೇಧೀಕರಣ ಕಲಿಕೆ (Separation learning)
- ✓ ಪರಿಕಲ್ಪನಾ ಕಲಿಕೆ (Concept learning)
- ✓ ತತ್ವಗಳ ಕಲಿಕೆ (Principle learning)
- ✓ ಸಮಸ್ಯೆ ಪರಿಹಾರ ಕಲಿಕೆ (Problem solving learning)

**1.6 ಶಿಕ್ಷಣದ ಅರ್ಥ :**

ಶಿಕ್ಷಣ ಎಂಬ ಪದವು ಆಂಗ್ಲ ಪದವಾದ Education ಎಂಬ ಪದಕ್ಕೆ ಸಮವಾಗಿದೆ. Education ಎಂಬ ಪದವು ಲ್ಯಾಟಿನ್ ಭಾಷೆಯಿಂದ ಬಂದಿದೆ. Educare (ಎಜುಕೇರ್) ಎಂಬುದು ಲ್ಯಾಟಿನ್ ಪದ, ಇದರ ಅರ್ಥ To norish to bearing up ಕ್ರಮವಾಗಿ ಬೆಳೆಯಿಸುವ ಮತ್ತು ಪೋಷಿಸು ಎಂದರ್ಥ. ಈ ಷಟ್ಪೋತ್ತತ್ತಿಯ ಮೇರೆಗೆ ಶಿಕ್ಷಣವೆಂದರೆ ಮಗುವಿನ ಜ್ಞಾನ ಸಂಪಾದನೆಗೆ ಸೂಕ್ತವಾದ ಕಲಿಕೆಯ ವಾತಾವರಣವನ್ನು ಸೃಷ್ಟಿಸಿ ಅದರ ಮೂಲಕ ಅವನ ವ್ಯಕ್ತಿತ್ವದ ಬೆಳವಣಿಗೆಯಾಗುವಂತೆ ಮಾಡುವುದಾಗಿದೆ. ಹಾಗೆಯೇ ಅವನಿಗೆ ಅತ್ಯುತ್ತಮವಾದಂತಹ ಸಂಸ್ಕಾರವನ್ನು ನೀಡಿ ಮಾನವೀಯ ಪ್ರಕಾರ ಮೂರ್ತಿಯಾಗುವಂತೆ ಪೋಷಿಸುವುದಾಗಿದೆ.

## 1.7 ಶಿಕ್ಷಣದ ವ್ಯಾಖ್ಯೆಗಳು :

1. "ಮನುಷ್ಯನಲ್ಲಿ ಈಗಾಗಲೇ ಇರುವ ದೈವತ್ವ ಆವಿಧಾನವದೇ ಶಿಕ್ಷಣ"

   – ಸ್ವಾಮಿ ವಿವೇಕಾನಂದ

2. "ಆತ್ಮಪ್ರಕಾಶ, ಪ್ರೇಮಗಳೆಂಬ ಸ್ಥಿರ ಸಂಪತ್ತನ್ನು ತಂದುಕೊಟ್ಟ ಮಗುವನ್ನು ಯೋಗ್ಯವಂತನನ್ನಾಗಿ ಮಾಡುವುದೇ ಶಿಕ್ಷಣ"

   – ರವೀಂದ್ರನಾಥ ಟ್ಯಾಗೋರ

3. "ಶಿಕ್ಷಣ ದೇಶಕ್ಕಾಗಿ ಹಾಗೂ ದೇಶಾಭಿಮಾನಕ್ಕಾಗಿ ತರಬೇತಿಯಾಗಿದೆ"

   – ಕೌಟಿಲ್ಯ

4. "ಯಾವುದು ಮಾನವನನ್ನು ಸ್ವಾವಲಂಬಿಯಾಗಿ ಮತ್ತು ನಿಸ್ವಾರ್ಥಿಯನ್ನಾಗಿ ಮಾಡುತ್ತದೆಯೋ ಅದುವೇ ಶಿಕ್ಷಣ".

   – ಋಗ್ವೇದ

5. "ಸಧೃಡವಾದ ದೇಹದಲ್ಲಿ ಸಧೃಡ ಮನಸ್ಸನ್ನು ನಿರ್ಮಿಸುವುದೇ ಶಿಕ್ಷಣ"

   – ಅರಿಸ್ಟಾಟಲ್

## 1.7 ಶಿಕ್ಷಣದ ಸ್ವರೂಪ :

1. ಶಿಕ್ಷಣವು ಸಧೃಡ ದೇಹದಲ್ಲಿ ಸಧೃಡ ಮನಸ್ಸನ್ನು ರೂಢಿಸುವುದಾಗಿದೆ.
2. ಶಿಕ್ಷಣವು ವ್ಯಕ್ತಿಯಲ್ಲಿರುವ ಆತಂಕ ಸೂಕ್ತ ಚೇತನಗಳನ್ನು ಹೊರ ಸೆಳೆಯುವುದಾಗಿದೆ.
3. ವ್ಯಕ್ತಿಯ ನಿಸರ್ಗದತ್ತವಾದ ಶಕ್ತಿಯ ಸಹಜ ಸಮರಸಾತ್ಮಕ ಮತ್ತು ಪ್ರಗತಿಪರ ಬೆಳವಣಿಗೆಯೇ ಶಿಕ್ಷಣ.
4. ವ್ಯಕ್ತಿಯ ದೈಹಿಕ, ಮಾನಸಿಕ ಮತ್ತು ಆದ್ಯಾತ್ಮಿಕ ಅತ್ಯುತ್ತಮ ಅಂಶಗಳನ್ನು ಹೊರ ಸೆಳೆಯುವುದಾಗಿದೆ.
5. ಶಿಕ್ಷಣವು ವ್ಯಕ್ತಿಯಲ್ಲಿ ಈಗಾಗಲೇ ಇರುವ ದೈವತ್ವದ ಆವಿರ್ಭಾವವಾಗಿದೆ.

6. ಶಿಕ್ಷಣವು ವ್ಯಕ್ತಿಯನ್ನು ಪರಿಪೂರ್ಣವನ್ನಾಗಿಸುವುದಾಗಿದೆ.

7. ವ್ಯಕ್ತಿಯ ನೋವು-ನಲಿವುಗಳನ್ನು ಸಮನಾಗಿ ಸ್ವೀಕರಿಸುವ ಸಾಮರ್ಥ್ಯವನ್ನು ಬೆಳೆಸುವುದೇ ಶಿಕ್ಷಣ.

8. ವ್ಯಕ್ತಿಯ ವ್ಯಕ್ತಿತ್ವದ ನಿರ್ಮಾಣವೇ ಶಿಕ್ಷಣ.

## 1.8 ಐತಿಹಾಸಿಕ ಹಿನ್ನೆಲೆ :

### ಭಾರತೀಯ ಶಿಕ್ಷಣದ ಪ್ರಮುಖ ಆಯೋಗಗಳು

**1) ಬ್ರಿಟೀಷರ ಕಾಲದಲ್ಲಿ ಶಿಕ್ಷಣ :**

ಬ್ರೀಟಿಷ ಪ್ರಣೀತ ಶಾಸನಬದ್ಧ ಶಿಕ್ಷಣವು 1857 ರಿಂದ ಪ್ರಾರಂಭವಾಯಿತು. ಮುಂಬಯಿ, ಮದ್ರಾಸ್, ಕಲ್ಕತ್ತಾಗಳಲ್ಲಿ ಏಕಕಾಲಕ್ಕೆ 3 ವಿಶ್ವವಿದ್ಯಾಲಯಗಳು ಸ್ಥಾಪಿತವಾದವು. ಅವುಗಳ ಬಹುಮುಖ್ಯ ಧ್ಯೇಯವು ಬ್ರೀಟಿಷ ಆಡಳಿತಕ್ಕೆ ಬೇಕಾದ ಕಾನೂನನ್ನು ನಿರ್ಮಿಸುವುದಾಗಿತ್ತು.

**2) 1854 ರ ವುಡನ್‌ರ ವರದಿ :**

ಭಾರತದಲ್ಲಿ ಶಿಕ್ಷಣದ ಪ್ರಗತಿಯ ಕುರಿತಾಗಿ ವಿಚಾರ ಮಾಡಲು 1853 ರಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿತ್ತು. ಇದರಲ್ಲಿ ಸರ್ ಫೆಡ್ರೀಕ್ ಹ್ಯಾಲಿಡಿ, ಎಚ್ ವಿಲ್ಸನ್ ಜನಫ್, ಟ್ರಾಪೀತಗಾನ, ಕ್ಯಾಮಲಿನ್ ಮುಂತಾದವರು ಭಾರತೀಯ ಶಿಕ್ಷಣದ ಕುರಿತಾಗಿ ಆಳವಾಗಿ ಅಭ್ಯಸಿಸಿ ತಮ್ಮ ವಿಚಾರವನ್ನು ವ್ಯಕ್ತಪಡಿಸಿದರು. ಸರ್ ಚಾರ್ಲ್ಸ್ ವುಡನ್‌ರವರು ನಿಯಂತ್ರಣಾ ಮಂಡಳಿಯ ಅಧ್ಯಕ್ಷರಾಗಿದ್ದರು. ಹೀಗಾಗಿ ಅವರ ಪರಿಪತ್ರಕ್ಕೆ ಹೆಸರನ್ನು ಇಡಲಾಗಿದೆ. ಭಾರತೀಯ ಶೈಕ್ಷಣಿಕ ಇತಿಹಾಸದಲ್ಲಿ

ವುಡನ್‌ರವರ ಪಾತ್ರ ಏಕಪ್ರಿಯವಾದ ಸ್ಥಾನವನ್ನು ಪಡೆದಿದೆ. ಇದು ಭಾರತೀಯ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದೆ. ಆದ್ದರಿಂದ ವುಡನ್ ವರದಿಯನ್ನು ಭಾರತೀಯ ಶಿಕ್ಷಣದ ತಳಹದಿ ಮಹಾಸನ್ನದು ಎಂದು ಕರೆಯಲಾಗುತ್ತದೆ.

## 1.9 ಪ್ರಾಚೀನ ಕಾಲದಲ್ಲಿ ಶಿಕ್ಷಣ :

ಬ್ರಾಹ್ಮಣ ವೇದ ಕಾಲದ ಶಿಕ್ಷಣದಲ್ಲಿ ಜಿವನವನ್ನು ಆದ್ಯಾತ್ಮಿಕ ಹಾಗೂ ಧಾರ್ಮಿಕದಿಂದ ಕೂಡಿದ್ದು, ಶಿಕ್ಷಣವು ಮನುಷ್ಯನನ್ನು ಕೇವಲ ದೈಹಿಕ ಜೀವನಕ್ಕಾಗಿ ಸಧೃಡಗೊಳಿಸದೇ ಪಾರಮಾರ್ಥಿಕ ಜೀವನಕ್ಕಾಗಿ ಸಿದ್ಧಗೊಳಿಸುವಂತಿತ್ತು.

ಈ ಕಾಲದಲ್ಲಿ ಶಿಕ್ಷಣವು ಜ್ಞಾನಾರ್ಜನೆ, ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆ, ಚಾರಿತ್ರ್ಯ ನಿರ್ಮಾಣ, ರಾಷ್ಟ್ರೀಯ ಸಂಸ್ಕೃತಿಯ ಬೆಳವಣಿಗೆ ಮತ್ತು ಉಳಿಸುವಿಕೆ, ಪೌರಪ್ರಜ್ಞೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೆಳೆಸುವುದು ಮತ್ತು ಲೌಕಿಕ ಸಿರಿಸಂಪತ್ತು ಈ ಕಾಲದ ಶಿಕ್ಷಣದ ಗುರಿಯಾಗಿತ್ತು.

## 1.10 ಮುಸ್ಲಿಂ ಕಾಲದಲ್ಲಿ ಶಿಕ್ಷಣ :

ಕ್ರಿ.ಶ. 8ನೇ ಶತಮಾನದಲ್ಲಿ ಭಾರತದ ಮೇಲೆ ಮಹಮ್ಮದಿಯರ ದಾಳಿ ಆರಂಭವಾಯಿತು. ಆದರೆ 13ನೇ ಶತಮಾನದಲ್ಲಿ ಶಾಶ್ವತವಾದ ಸಾಮ್ರಾಜ್ಯವನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾದರು. ಖುರಾನಿನಲ್ಲಿ ಶಿಕ್ಷಣವನ್ನು ಕರ್ತವ್ಯವೆಂದು ಹೇಳಿರುವುದರಿಂದ ವಿವಿಧ ಮುಸಲ್ಮಾನ ಅರಸರು ಇಸ್ಲಾಂ ಧರ್ಮಕ್ಕೆ ಅನುಗುಣವಾದ ಹೊಸ ಶಿಕ್ಷಣ ಪದ್ಧತಿಯನ್ನು ಉದ್ಘಾಟಿಸಿ ಅದನ್ನು ಬೆಳೆಸಿದರು.

ಈ ಕಾಲದಲ್ಲಿ ಜ್ಞಾನ ಪ್ರಸಾರವನ್ನು ಮಾಡುವುದು, ಇಸ್ಲಾಂ ಧರ್ಮದ ಪ್ರಚಾರ, ಸಾಮಾಜಿಕ ನೀತಿ ನಿಯಮಗಳ ಬೆಳವಣಿಗೆಯನ್ನು ಮಾಡುವುದು ಈ ಶಿಕ್ಷಣದ ಗುರಿಯಾಗಿತ್ತು.

## 1.11 ವುಡನ್ ವರದಿಯ ಪ್ರಮುಖ ಶಿಫಾರಸುಗಳು :

1) ಸರ್ಕಾರದ ಹೊಣೆಗಾರಿಕೆ
2) ಶಿಕ್ಷಣದ ಗುರಿಗಳು
3) ಭೋಧನಾ ಮಾಧ್ಯಮ
4) ಅಧ್ಯಯನದ ವಿಧಗಳು
5) ಶಿಕ್ಷಣದ ವಿಭಾಗಗಳನ್ನು ತೆರೆಯುವುದು.
6) ವಿಶ್ವವಿದ್ಯಾಲಯದ ಸ್ಥಾಪನೆ
7) ಅನುದಾನ ಅಥವಾ ಸಹಾಯಧನ
8) ಶಿಕ್ಷಕರಿಗಾಗಿ ತರಬೇತಿ
9) ಶಾಲೆಗಳನ್ನು ತೆರೆಯುವುದು
10) ಸ್ತ್ರೀ ಶಿಕ್ಷಣ
11) ಮುಸ್ಲಿಂ ಶಿಕ್ಷಣ
12) ಸಮುದಾಯದ ಶಿಕ್ಷಣದ ವಿಸ್ತರಣೆ

## 1.12 ಭಾರತೀಯ ಶಿಕ್ಷಣ ಆಯೋಗ – 1883 :

### ಈ ಆಯೋಗದ ಉದ್ದೇಶಗಳು :

ಹಂಟರ ವರದಿಯ ಪ್ರಮುಖವಾದ ಉದ್ದೇಶವೆಂದರೆ ಸರ್ಕಾರದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಪ್ರಯತ್ನ ಸಾಮಾನ್ಯ ಜನರ ಪ್ರಾಥಮಿಕ ಶಿಕ್ಷಣ ನೀಡುವುದು.

1. ಪ್ರಾಥಮಿಕ ಸಂಸ್ಥೆಗಳ ಸ್ಥಿತಿ ಮತ್ತು ಪ್ರಾಥಮಿಕ ಶಿಕ್ಷಣದ ವಿಸ್ತರಣಾ ಕ್ರಮಗಳ ಮೇಲ್ವಿಚಾರಣೆ.
2. ಪ್ರಾಂತೀಯ ಸಂಸ್ಥೆಗಳ ಸ್ಥಿತಿಗತಿ ಮತ್ತು ಶಿಕ್ಷಣದ ಕ್ಷೇತ್ರದಲ್ಲಿ ಅವುಗಳ ಪಾತ್ರ.
3. ಭಾರತೀಯ ಶಿಕ್ಷಣದ ಸಾಮಾನ್ಯ ಯೋಜನೆಯಲ್ಲಿ ಪ್ರಾಂತೀಯ ಸಂಸ್ಥೆಗಳ ಪಾತ್ರ.
4. ಖಾಸಗಿ ಸಂಸ್ಥೆಗಳಿಗೆ ಸರ್ಕಾರದ, ಧೋರಣೆ ಅನುದಾನ ಸಂಹಿತೆ

ಈ ಆಯೋಗದ ಪ್ರಥಮ ಸಭೆಯು ಕಲ್ಕತ್ತಾದಲ್ಲಿ ಎರಡು ತಿಂಗಳುಗಳ ಕಾಲ ನಡೆಯಿತು. ನಂತರ 8 ತಿಂಗಳ ಕಾಲ ಭಾರತದ ತುಂಬೆಲ್ಲಾ ಸಂಚರಿಸಿ ನಂತರ 600 ಪ್ರಕಟ ಪ್ರೌಢ ವರದಿಯನ್ನು ಸಿದ್ಧಪಡಿಸಲಾಯಿತು.

**ಆಯೋಗದ ಶಿಫಾರಸುಗಳು :**

1. ದೇಶಿಯ ಶಿಕ್ಷಣ
2. ಪ್ರಾಥಮಿಕ ಶಿಕ್ಷಣ
3. ಮಾಧ್ಯಮಿಕ ಶಿಕ್ಷಣ
4. ಉನ್ನತ ಶಿಕ್ಷಣ
5. ಶಿಕ್ಷಕರ ಶಿಕ್ಷಣ
6. ವಿಶೇಷ ಶಿಕ್ಷಣ
7. ಅನುದಾನ ಸಂಹಿತೆ.

**10 + 2 + 3 ಶಿಕ್ಷಣ ವಿನ್ಯಾಸ :**

- 10 + 2 + 3 ಶಿಕ್ಷಣ ವಿನ್ಯಾಸವು ಕಾಲೇಜುಗಳ ತರಗತಿಗಳ ಸಂಬಂಧಿಸಿದ ಹೊಸ ಸುಧಾರಣೆ

- ಈ ಶಿಕ್ಷಣ ವಿನ್ಯಾಸವನ್ನು ಕಲ್ಕತ್ತಾ ವಿಶ್ವವಿದ್ಯಾಲಯವು ಆಯೋಗ ಸ್ಯಾಡ್ಲರ್ ಆಯೋಗವು 1917 – 1919 ರಲ್ಲಿ ಶಿಫರಸು ಮಾಡಿತ್ತು.
- ವಿಶ್ವವಿದ್ಯಾಲಯ ಆಯೋಗ (1948–49) ಪುನಃ ಈ ಹೊಸ ವಿನ್ಯಾಸವನ್ನು ಚರ್ಚೆಗೆ ತೆಗೆದುಕೊಂಡಿತ್ತು. ಈ ಸಮಸ್ಯೆ ಮಾಧ್ಯಮಿಕ ಶಿಕ್ಷಣ ಆಯೋಗ (1952–53) ದಲ್ಲಿ ಬಂದಿತ್ತು. ಈ ಆಯೋಗವು ಶಾಲಾವಧಿಯ 11 ವರ್ಷ ಮತ್ತು ಮೊದಲ ಪದವಿಯು 3 ವರ್ಷದ್ದಾಗಿರಬೇಕು ಎಂದು ಸಲಹೆ ನೀಡಿತ್ತು.
- 1955 ರಲ್ಲಿ ಕೇಂದ್ರ ಶಿಕ್ಷಣಾ ಸಲಹಾ ಸಮಿತಿ ಈ ಶಿಕ್ಷಣ ಪದ್ಧತಿಯ ಅವಶ್ಯಕತೆಯ ಬಗ್ಗೆ ಮತ್ತು ಶಾಲಾ ಗುಣಮಟ್ಟವನ್ನು ಉತ್ತಮಪಡಿಸುವುದರ ಬಗ್ಗೆ ಮಾಧ್ಯಮಿಕ ಶಿಕ್ಷಣದ ಆಯೋಗವು ಆಧಾರಿಸಿ ಕೇಲವು ಸಲಹೆಗಳನ್ನು ನೀಡಿತ್ತು.
- 1960 ರಲ್ಲಿ ಯೋಜನಾ ಆಯೋಗ ಶಾಲಾವಧಿಯು 12 ವರ್ಷದ್ದಾಗಿರಬೇಕು ಮತ್ತು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣ 15 ವರ್ಷ ಅವಧಿಯದ್ದಾಗಿರಬೇಕು.
- ಭಾರತೀಯ ಶಿಕ್ಷಣ ಆಯೋಗ (1964–65) ವು ಕೋಠಾರಿಯವರ ಅಧ್ಯಕ್ಷತೆಯಲ್ಲಿ ಶೈಕ್ಷಣಿಕ ಅಂಶಗಳನ್ನು ಪರಿಗಣಿಸಿ ದೇಶದ ಎಲ್ಲಾ ಭಾಗಗಳಲ್ಲಿ ಒಂದೇ ತೆರೆನಾದ ಶಿಕ್ಷಣ ಪದ್ದತಿಯನ್ನು ಜಾರಿಗೆ ತರಬೇಕೆಂದು ಶಿಫಾರಸ್ಸು ಮಾಡಿತ್ತು.
- **ಶಿಕ್ಷಣ :** ಶಿಕ್ಷಣದ ಪುನರಚನೆಯಲ್ಲಿ ಶಿಕ್ಷಕನ ಪಾತ್ರ ಅತ್ಯಂತ ಮಹತ್ವದ್ದು. ಇದಕ್ಕೆ ಆತನ ವೈಯಕ್ತಿಕ ಗುಣಗಳು, ವಿದ್ಯಾರ್ಹತೆ, ವೃತ್ತಿ ತರಬೇತಿ ಮತ್ತು ಶಾಲೆ ಹಾಗೂ ಸಮುದಾದಲ್ಲಿ ಆತನು ಪಡೆದಿರುವ ಸ್ಥಾನವನ್ನು ಅವಲಂಬಿಸಿರುವುದು.

– **ಪ್ರೌಢಶಿಕ್ಷಣ ಆಯೋಗ (1952–53)**

- ಭಾರತದ ಭವಿಷ್ಯ ಶಾಲಾ ತರಗತಿಯ ನಾಲ್ಕು ಕೋಣೆಗಳ ಮಧ್ಯೆ ಅಡಗಿದೆ. ಇಂತಹ ಭವಿಷ್ಯವನ್ನು ಉಜ್ವಲವಾಗಿ ರೂಪಿಸುವವನೇ ನಿಜವಾದ ಶಿಕ್ಷಕ.

– **ಕೋಠಾರಿ ಶಿಕ್ಷಣ ಆಯೋಗ (1964 – 66)**

- ಶಿಕ್ಷಣ ವ್ಯವಸ್ಥೆ ಮತ್ತು ಶಿಕ್ಷಣ ಸಮುದಾಯದ ಮೇಲೆ ಒಂದು ರಾಷ್ಟ್ರದ ಉನ್ನತಿ ಅಡಗಿಸಿ.

– **ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (1986)**

- **ಶಿಕ್ಷಕ ಪದದ ಅರ್ಥ (Meaning of the word teacher) :**

ಶಿಕ್ಷಕ ಎಂಬ ಪದವು ಶಿಕ್ಷಕನ ಗುಣಲಕ್ಷಣಗಳನ್ನು ಹೀಗೆ ಸೂಚಿಸುವುದು, ಅಂದರೆ ;

ಶಿ – ಶಿವ ಸ್ವರೂಪಿಯಾಗಿ

ಕ್ಷ – ಕ್ಷಕಿರಣೋಪಾದಿಯಲ್ಲಿ

ಕ – ಕರ್ಮವನ್ನು ಎಸಗುವವನು

- ಆಂಗ್ಲ ಭಾಷೆಯ **teacher** ಎಂಬ ಪದದ ಪ್ರತಿ ಅಕ್ಷರಗಳು ಶಿಕ್ಷಕನ ಒಂದೊಂದು ಗುಣಲಕ್ಷಣಗಳನ್ನು ಎತ್ತಿ ಹಿಡಿಯುತ್ತವೆ.

T – Truth (ಸತ್ಯ)

E - Enthusiasm (ಉತ್ಸಾಹಿ)

A - Ability (ಸಾಮರ್ಥ್ಯ)

C - Character (ನಡತೆ)

H - Honesty (ಪ್ರಾಮಾಣಿಕತೆ)

E - Earnest (ಸಂಪಾದಿಸು)

R - Resourcefuiness (ಸಂಪನ್ಮೂಲಭರಿತ)

## 1.14 ಸಮಸ್ಯೆಯ ಕುರಿತಾದ ಹೇಳಿಕೆ :

ಇತ್ತೀಚಿನ ದಿನಗಳಲ್ಲಿ ಕಲಿಕೆಯ ಕುರಿತಯ ವಿದ್ಯಾರ್ಥಿಗಳು ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಕಲಿಕೆಯ ವಿಷಯಗಳಲ್ಲಿ ಮಾನಸಿಕ ಒತ್ತಡ, ಆಸಕ್ತಿ, ಅಭಿರುಚಿಗಳನ್ನು ಕಂಡುಕೊಳ್ಳುವುದು. ಪ್ರಸ್ತುತ ಯೋಜನಾ ವರದಿಯು ವಿದ್ಯಾರ್ಥಿಗಳ ಕಲಿಕೆಯ ಕುರಿತು ಕಲಿಕಾ ವಿಷಯದಲ್ಲಿ ಅನುಭವಿಸುವ ತೊಂದರೆಗಳ ಕುರಿತು ಅನುಗುಣವಾಗಿ ವಿದ್ಯಾರ್ಥಿಗಳಲ್ಲಿ ಕಂಡುಬರುವ ಮಾನಸಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳಬಹುದಾಗಿದೆ.

## 1.15 ಅಧ್ಯಯನದ ಗುರಿ ಮತ್ತು ಉದ್ದೇಶಗಳು :

### 1. ಗುರಿ :

ಕಲಿಕೆಯ ಕುರಿತು ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಗತಿ ಕುರಿತು ಅಧ್ಯಯನಿಸುವುದು.

### 2. ಉದ್ದೇಶಗಳು :

1) ಕಲಿಕೆಯ ಕುರಿತು ವಿದ್ಯಾರ್ಥಿಗಳ ಆಸಕ್ತಿಯನ್ನು ಅರಿಯುವುದು.
2) ಕಲಿಕೆಯಲ್ಲಿ ವಿದ್ಯಾರ್ಥಿಗಳು ಎದುರಿಸುವ ತೊಡಕುಗಳ ಬಗ್ಗೆ ತಿಳಿಯುವುದು.
3) ಕಲಿಕೆಯ ಕುರಿತು ವಿದ್ಯಾರ್ಥಿಗಳ ಬಗ್ಗೆ ಪೋಷಕರ ಅಭಿಪ್ರಾಯ ತಿಳಿಯುವುದು.
4) ವಿದ್ಯಾರ್ಥಿಗಳ ಪೋಷಕರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯ ಬಗ್ಗೆ ಅರಿಯುವುದು.
5) ವಿದ್ಯಾರ್ಥಿಗಳ ಪೋಷಕರ ಕೌಟುಂಬಿಕ ಸ್ಥಿತಿಯನ್ನು ಕುರಿತು ತಿಳಿಯುವುದು.

## ಅಧ್ಯಯನದ ಮಹತ್ವ :

- ಕಲಿಕೆಯ ಕುರಿತು ವಿದ್ಯಾರ್ಥಿಗಳು ಯಾವ ರೀತಿ ಆಸಕ್ತಿ ಹೊಂದಿರುತ್ತಾರೆ.
- ಕಲಿಕಾ ವಿಷಯಗಳಲ್ಲಿ ಎಂತಹ ತೊಡಕುಗಳನ್ನು ಅನುಭವಿಸುತ್ತಾರೆ.
- ಕಲಿಕಾ ಮಾಧ್ಯಮದ ಕುರಿತು ಅಭಿಪ್ರಾಯಗಳನ್ನು ತಿಳಿಯುವುದೇ ಈ ಕಿರು ಪ್ರಬಂಧದ ಮಹತ್ವವಾಗಿದೆ.

# ಅಧ್ಯಾಯ – 2

# ಸಾಹಿತ್ಯ ಅಧ್ಯಯನ/ಅವಲೋಕನ

## 2.1 ಪೀಠಿಕೆ :

ಈ ಯೋಜನಾ ವರದಿಯನ್ನು ಕೈಗೊಳ್ಳಲು ಕೆಲವೊಂದು ವಿಮರ್ಶೆಗಳ ಮೂಲಕ ನನ್ನ ಅಧ್ಯಯನ ಮಾಡಲು ಸಹಾಯಕಾರಿಯಾಗಿದೆ. ಆ ವಿಮರ್ಶೆಗಳು ಈ ಕೆಳಗಿನಂತಿವೆ :

**1) ಶೈಕ್ಷಣಿಕ ಮನೋವಿಜ್ಞಾನ : ಡಾ॥ ಹೆಚ್. ವ್ಹಿ. ಮಹಾದೇವಪ್ಪಾ (2011–12) :**

ಕಲಿಕೆಯ ಅರ್ಥ ಕಲಿಕೆ ಎಂಬುದು ಮುಂದೆ ಎದುರಾಗುವ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಎದುರಿಸುವಂತೆ ಮೂಲ ವರ್ತನೆಗಳನ್ನು ಅನುಭವಗಳ ಮೂಲಕ ಮಾರ್ಪಡಿಸುವುದೇ ಶಿಕ್ಷಣ. ಹೀಗಾಗಿ ಯಾವುದೇ ಮೂಲವರ್ತನೆ ಮಾರ್ಪಟ್ಟರೂ ಅದು ಕಲಿಕೆಯಾಗುತ್ತದೆ ಎಂದು ತಿಳಿದು ಬರುತ್ತದೆ. ಕಲಿಕೆಯ ಕುರಿತಾದ ಸ್ವರೂಪ ಲಕ್ಷಣಗಳನ್ನು ತಿಳಿದುಕೊಳ್ಳಲಾಗಿದೆ. ಕಲಿಕಾ ಸಿದ್ಧಾಂತಗಳ ಕುರಿತು ಕಲಿಕೆಯ ವಿಧಗಳ ಕುರಿತು ತಿಳಿಯಲಾಗಿದೆ.

**2. "ಮಕ್ಕಳ ವಿಕಾಸ ಬೋಧನಾಶಾಸ್ತ್ರ ಶೈಕ್ಷಣಿಕ ಮನೋವಿಜ್ಞಾನ" (2011)**
**ಜಗದೀಶ. ಬಿ. ಬಸಂಪುರ :**

ಇದರಲ್ಲಿ ಕಲಿಕೆ ಕಲಿಕೆಯ ಪೋಷಕರ ಅಭಿಪ್ರೇರಣೆ ಕಲಿಕೆಯ ಕುರಿತು ತಿಳಿದುಕೊಳ್ಳಬಹುದಾಗಿದೆ.

**3. ಶೈಕ್ಷಣಿಕ ಮನೋವಿಜ್ಞಾನ (2009) : ಆರ್.ಜೆ. ಪ್ರಭು :**

ಕಲಿಕೆಯ ಅರ್ಥ, ಲಕ್ಷಣ, ವ್ಯಾಖ್ಯೆಗಳ ಸ್ವರೂಪ ಕಲಿಕೆಯ ವಿಧಗಳ ಕುರಿತು ತಿಳಿಯಬಹುದಾಗಿದೆ.

**4. ಭಾರತದಲ್ಲಿ ಶಿಕ್ಷಣ ಮತ್ತು ಪ್ರಚಲಿತ ಸಮಸ್ಯೆಗಳು (1999),**
**ಎಸ್.ಬಿ.ಯಾದವಾಡ :**

ಈ ಪುಸ್ತಕದಿಂದ ಶಿಕ್ಷಣದ ಕುರಿತು ತಿಳಿದುಕೊಳ್ಳಬಹುದಾಗಿದೆ. ಶಿಕ್ಷಣದ ಅರ್ಥ, ವ್ಯಾಖ್ಯೆ, ಲಕ್ಷಣ, ಸ್ವರೂಪಗಳ ಕುರಿತು ಭಾರತದ ಶಿಕ್ಷಣ ಕುರಿತು ಈ ಪುಸ್ತಕದಿಂದ ತಿಳಿಯಲಾಗಿದೆ.

# ಅಧ್ಯಾಯ – 3
# ಸಂಶೋಧನಾ ವಿಧಾನಶಾಸ್ತ್ರ

## 3.1 ಪೀಠಿಕೆ :

ಸಂಶೋಧನಾ ವಿನ್ಯಾಸವೆಂಬುದು ಸಂಶೋಧನೆಯಲ್ಲಿ ಬಹಳ ಮುಖ್ಯವಾದ ಒಂದು ಹಂತವಾಗಿರುತ್ತದೆ. ಸಂಶೋಧನಾ ಉದ್ದೇಶವನ್ನು ಪೂರೈಸುವುದಕ್ಕೋಸ್ಗರ ಸಂಶೋಧಕನು ತನ್ನ ಸಂಶೋಧನಾ ಪ್ರಕ್ರಿಯೆಯನ್ನು ಸಮಗ್ರವಾಗಿ ಆಲೋಚನೆ ಮಾಡಿ ತಯಾರಿಸಿದ ಯೋಜನೆಯೊಂದನ್ನು ಸಂಶೋಧನಾ ವಿನ್ಯಾಸವೆಂದು ಕರೆಯುವುದು.

1) ಅಧ್ಯಯನವು ಆಯ್ದ ವಿಷಯವನ್ನು ಕುರಿತದ್ದು.

2) ಅಧ್ಯಯನವು ಯಾವ ಉದೇಶಕ್ಕಾಗಿ ಮಾಡಲಾಗುತ್ತಿದೆ.

3) ಅಧ್ಯಯನವನ್ನು ಎಲ್ಲಿ ಮಾಡಲಾಗುವುದು.

4) ನಮೂನೆಯ ವಿನ್ಯಾಸ ಯಾವ ಬಗೆಯದು.

1) ಈ ಒಂದು ಸಂಶೋಧನೆಯ **"ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳ ಕಲಿಕೆಯ ಮಾನಸಿಕ ಸ್ಥಿತಿಗತಿ ಕುರಿತು ಸಮಾಜಶಾಸ್ತ್ರೀಯ ಅಧ್ಯಯನ"**. ಈ ಅಧ್ಯಯನದ ಮೂಲಕ ಸರಿಯಾದ ದತ್ತಾಂಶವನ್ನು ಸಂಗ್ರಹಿಸಲು ಸಂಶೋಧಕರು ವಿನ್ಯಾಸಗಳಲ್ಲಿ ಪ್ರಶ್ನಾವಳಿ ವಿಧಾನದ ಮೂಲಕ, ಸಂದರ್ಶನದ ಮೂಲಕ ವಿದ್ಯಾರ್ಥಿಗಳನ್ನು ನೇರವಾಗಿ ಭೇಟಿಮಾಡಿ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಗತಿಯ ಬಗ್ಗೆ ತಿಳಿಯಲಾಗಿದ್ದು ಈ ಮೂಲಕ ದತ್ತಾಂಶವನ್ನು ಸಂಗ್ರಹಿಸಲಾಗಿದೆ.

## 3.2 ಸಂಶೋಧನಾ ವಿಧಾನ ಮತ್ತು ವಿನ್ಯಾಸ :

ನಮೂನೆ/ಮಾದರಿಯ ವಿಧಾನ ಎಂಬುದು ಸಾಮಾಜಿಕ ಸಂಶೋಧನೆಯಲ್ಲಿ ಅನುಸರಿಸಲಾಗುತ್ತಿರುವ ಕ್ರಮಗಳಲ್ಲೊಂದು. ಸಾಮಾಜಿಕ ಸಂಶೋಧನೆಯ ಕ್ಷೇತ್ರವು ಬಹಳ ವಿಶಾಲವಾದುದ್ದರಿಂದ ಅದನ್ನು ಒಂದೇ ಬಾರಿಗೆ ಅಧ್ಯಯನ ಮಾಡುವುದು ಬಹಳ ಕಷ್ಟಕರ. ಆದ್ದರಿಂದ ಕ್ಷೇತ್ರವು ಸಾಮಾನ್ಯ ಗುಣಗಳನ್ನು ಹೊಂದಿರುವುದರಿಂದ ಅದನ್ನು ಪ್ರತಿನಿಧಿಸಬಹುದಾದಂತಹ ಅದರ ಭಾಗವೊಂದನ್ನು ಅಧ್ಯಯನ ದೃಷ್ಟಿಯಿಂದ ಆಯ್ದುಕೊಳ್ಳುವುದಕ್ಕೆ ನಮೂನೆ/ಮಾದರಿ ಎಂದು ಕರೆಯುತ್ತಾರೆ.

ಈ ವಿಧಾನವನ್ನು ಅಳವಡಿಸಿಕೊಳ್ಳುವುದಕ್ಕೆ ಮುಂಚೆ ಸಂಶೋಧನೆಗೆ ಸಂಬಂಧಿಸಿದಂತೆ ಸಂಶೋಧಕನಿಗೆ ಬಹಳ ಆಳವಾದ ಪರಿಜ್ಞಾನವಿರಬೇಕಾಗಿಲ್ಲ. ಆದರೆ ಸಾಮಾನ್ಯ ಕನಿಷ್ಟ ಮಾಹಿತಿಯಿದ್ದರೂ ಅಷ್ಟೇ ಸಾಕಾಗುವುದು. ಇದು ಸಂಶೋಧಕನ ಪಕ್ಷಪಾತತೆಯಿಂದ ಹಾಗೂ ಪೂರ್ವಾಗ್ರಹಗಳಿಂದ ಮುಕ್ತವಾಗಿರುತ್ತದೆ.

ಈ ವಿಧಾನವು ಅನುಕರಣೆಯ ದೃಷ್ಟಿಯಿಂದ ಬಹಳ ಸರಳವಾದುದಾಗಿರುತ್ತದೆ. ಹಾಗೂ ಬೃಹತ್ ವಿಶ್ವವನ್ನು ಹೆಚ್ಚು ಸಮರ್ಪಕವಾಗಿ ಪ್ರತಿನಿಧಿಸುತ್ತದೆ.

## 3.3 ನಮೂನೆಯ ವಿಧಾನ :

ಈ ಸಂಶೋಧನೆಯಲ್ಲಿ ಪ್ರಮುಖವಾಗಿ ಕಲಬುರಗಿ ಜಿಲ್ಲೆಯ ಮಹಾಗಾಂವ ಗ್ರಾಮವನ್ನು ಆಯ್ದುಕೊಂಡು ಗ್ರಾಮದ ಖಾಸಗಿ ಪ್ರೌಢಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆಯ 8 ರಿಂದ 10ನೇ ತರಗತಿಯ ಮಕ್ಕಳನ್ನು ಸರಳ ಮಾಧ್ಯಮಿಕ ನಮೂನೆಯ ವಿಧಾನದಿಂದ ಆಯ್ದುಕೊಳ್ಳಲಾಗಿದೆ.

### 3.4 ನಮೂನೆಯ ಗಾತ್ರ :

50 ಜನ ಮಕ್ಕಳನ್ನು ನಮೂನೆಯನ್ನಾಗಿ ಆಯ್ಕೆಮಾಡಿಕೊಳ್ಳಲಾಯಿತು. ಈ ಮಕ್ಕಳು ನೀಡಿದ ಮಾಹಿತಿಯು ಇಡೀ ಶಾಲೆಯ ಮಕ್ಕಳನ್ನು ಪ್ರತಿನಿಧಿಸುವಂತಹದ್ದಾಗಿದ್ದು, ಅಧ್ಯಯನಕ್ಕೆ ಸೂಕ್ತ ಮಾಹಿತಿಯನ್ನು ಒದಗಿಸುತ್ತದೆ.

### 3.5 ನಮೂನೆಯ ಆಯ್ಕೆ ವಿಧಾನ :

ಮಹಾಗಾಂವ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಯ 8 ಮತ್ತು 9ನೇ ತರಗತಿಯ 25 ಮತ್ತು 10ನೇ ತರಗತಿಯ 25 ವಿದ್ಯಾರ್ಥಿಗಳನ್ನು ಲಾಟರಿ ಮೂಲಕ ಆರಿಸುವ ವಿಧಾನವನ್ನು ಬಳಸಿಕೊಂಡು ಅಧ್ಯಯನ ಕೈಗೊಳ್ಳಲಾಯಿತು.

### 3.6 ಮಾಹಿತಿ/ದತ್ತಾಂಶ ಸಂಗ್ರಹಣೆಯ ವಿಧಾನ :

ಮಾಹಿತಿ ಸಂಗ್ರಹಣೆಯನ್ನು ಎರಡು ವಿಧಾನಗಳಿಂದ ಸಂಗ್ರಹಿಸಬಹುದಾಗಿದೆ.

1. ಪ್ರಾಥಮಿಕ ವಿಧಾನ
2. ಮಾಧ್ಯಮಿಕ ವಿಧಾನ

**1. ಪ್ರಾಥಮಿಕ ವಿಧಾನ :**

ಪ್ರಾಥಮಿಕ ಮಾಹಿತಿ ಸಂಗ್ರಹಣೆಯ ವಿಧಾನವೆಂದರೆ ಸಮಾಜಶಾಸ್ತ್ರದಲ್ಲಿ ಸಂಶೋಧಕನು ತನ್ನ ಅಧ್ಯಯನಕ್ಕೆ ಅವಶ್ಯವಾಗಿರುವ ಉದ್ದೇಶ ಸಮೂಹ ಅಥವಾ ಸಮುದಾಯದ ಜೊತೆ ಜೀವನದೊಂದಿಗೆ ಭಾಗಿಯಾಗುವುದರೊಂದಿಗೆ ಅದರ ನಡೆ-ನುಡಿ, ಆಚಾರ-ವಿಚಾರ, ಸಂಸ್ಕೃತಿ, ಆದರ್ಶ ಮೌಲ್ಯಗಳು, ಭಾವನೆಗಳು, ಜೀವನದ ದೃಷ್ಟಿಕೋನ ಮುಂತಾದವುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅರ್ಥ

ಮಾಡಿಕೊಳ್ಳುವುದಾಗಿರುತ್ತದೆ. ಪ್ರಾಥಮಿಕ ಮಾಹಿತಿ ಸಂಗ್ರಹಣೆಯನ್ನು ಮೂರು ವಿಧಾನದ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಅವುಗಳೆಂದರೆ :

- **ದತ್ತಾಂಶ ಸಂಗ್ರಹಣೆ ಸಾಧನಗಳು ಹಾಗೂ ತಂತ್ರಗಳು :**

  ಸಂಶೋಧಕನು ತಾನು ಮೊದಲೇ ತಯಾರಿಸಿದ ಪ್ರಶ್ನೆಗಳ ಮಾಲಿಕೆಯನ್ನು ಮಾಹಿತಿ ನೀಡುವ ರೂಢಿ, ಅದರಿಂದಲೇ ಉತ್ತರಗಳನ್ನು ಪಡೆಯುತ್ತಾರೆ.

- **ಅವಲೋಕನ ತಂತ್ರ :**

  ಅವಲೋಕನವು ಸಮಾಜಶಾಸ್ತ್ರದ ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣೆಗಾಗಿ ಬಳಸಲಾಗುತ್ತಿರುವ ವಿಧಾನಗಳಲ್ಲಿ ಒಂದು ತಂತ್ರವಾಗಿದೆ. ಯಾವುದೇ ವಸ್ತು ವಿಷಯದ ಬಗ್ಗೆ ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಂಡು ಆಲಿಸಿ ಮಾಹಿತಿಯನ್ನು ಸಂಗ್ರಹಿಸುವುದನ್ನು ಅವಲೋಕನ ಎಂದು ಕರೆಯುತ್ತಾರೆ.

**2. ಮಾಧ್ಯಮಿಕ ಮಾಹಿತಿ ಸಂಗ್ರಹಣೆ :**

ಸಾಮಾಜಿಕ ಸಂಶೋಧನೆಯಲ್ಲಿ ಬಳಸಲಾಗುವ ಅನುಷಂಗಿಕ ಮೌಲ್ಯಗಳಲ್ಲಿ ಎರಡು ಬಗೆಯ ದಾಖಲೆಗಳು ಸೇರಿಕೊಳ್ಳುತ್ತದೆ.

1. ವೈಯಕ್ತಕ ದಾಖಲೆಗಳು
2. ಸಾರ್ವಜನಿಕ ದಾಖಲೆಗಳು

ಅನುಷಾಂಗಿಕ ದಾಖಲೆಗಳಲ್ಲಿ ಜೀವನ ತಂತ್ರಗಳು, ದಿನಚರಿಗಳು, ಪತ್ರಗಳು, ಘಟನೆಗಳು, ಲಿಖಿತಗಳು, ಪ್ರಕಾಶಿತ ದಾಖಲೆಗಳು, ಕಡತಗಳು, ವರದಿಗಳು, ವರ್ತಮಾನ ಪತ್ರಿಕೆಗಳು ಮುಂತಾದವುಗಳು ಸೇರಿಕೊಳ್ಳುತ್ತವೆ.

**3. ಮಾಹಿತಿ ವಿಶ್ಲೇಷಣೆ :**

ಪ್ರಾಥಮಿಕ ಹಾಗೂ ಮಾಧ್ಯಮಿಕ ಮಾಹಿತಿ ಸಂಗ್ರಹಣೆ ಮಾಡಿದ ದತ್ತಾಂಶಗಳನ್ನು ವಿಶ್ಲೇಷಣೆ ಮಾಡಲು ಮಾದರಿಯಾಗಿ ಸಂಗ್ರಹಿಸಿದ ಉತ್ತರಗಳಿಗೆ ಮಾಹಿತಿಯನ್ವಯವನ್ನು ಸರಿಪಡಿಸಿ ಸಂಕೇತಿಕರಣ ಸೂಚನೆಯನ್ನು ತಯಾರಿಸಿ ಅದನ್ನು MS Excel Sheet ನಲ್ಲಿ ನಮೂದಿಸಿ ಅದರಿಂದ ಫಲಿತಾಂಶವನ್ನು ಪಡೆದು ನಂತರ ಬಂದ ಫಲಿತಾಂಶಗಳನ್ನು ಕೋಷ್ಟಕಗಳ ರೂಪದಲ್ಲಿರಿಸಿ ಅದಕ್ಕೆ ಸೂಕ್ತವಾಗಿ ವಿವರಿಸಲಾಗಿದೆ.

- **ಮಾಹಿತಿ ವಿಶ್ಲೇಷಣೆ ಹಾಗೂ ವರದಿ ತಯಾರಿಕೆಯ ವಿಧಾನಗಳು :**

ವಿವಿಧ ವಿಧಾನಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಸಂಕ್ಷಿಪ್ತಗೊಳಿಸಲು ಅದನ್ನು ಅಂಕಿ ಅಂಶಗಳ ರೂಪದಲ್ಲಿ ವ್ಯಕ್ತಪಡಿಸುವಲ್ಲಿ ಹಲವಾರು ವಿಧಾನ, ಸಾಧನ ಸಲಕರಣೆಗಳನ್ನು ಬಳಸಿಕೊಳ್ಳಲಾಯಿತು. ಅವುಗಳೆಂದರೆ :

1. ಮಾಸ್ಟರ ಚಾರ್ಟ್
2. ಕೋಡಿಂಗ್ ಕೀ
3. ಡಿ ಕೋಡಿಂಗ್
4. ಗಣಕಯಂತ್ರ
5. ಕೋಷ್ಟಕಗಳು

# ಅಧ್ಯಾಯ – 4

# ಕೋಷ್ಟಕ ರಚನೆ, ದತ್ತಾಂಶಗಳ ವಿಶ್ಲೇಷಣೆ ಹಾಗೂ ಅರ್ಥ ನಿರೂಪಣೆ

## 4.1 ಪೀಠಿಕೆ :

ಈ ಒಂದು ಪ್ರಸ್ತುತ ಅಧ್ಯಯನವು ದತ್ತಾಂಶವನ್ನು ಸರಳವಾಗಿ ಅರ್ಥೈಸಲು ಕೋಷ್ಟಕಗಳ ರಚನೆ ಮಾಡಲಾಗಿದೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಕೋಷ್ಟಕ – 1

**ವಿದ್ಯಾರ್ಥಿಗಳಲ್ಲಿ ಮಾಧ್ಯಮ ಆಯ್ಕೆಯ ವಿವರ.**

| ಕ್ರ.ಸಂ. | ವಿವರ | ಪ್ರತಿಕ್ರಿಯಿಸುವವರು | ಪ್ರತಿಶತ |
|---|---|---|---|
| 1 | ಕನ್ನಡ | 42 | 84 |
| 2 | ಇಂಗ್ಲೀಷ | 04 | 08 |
| 3 | ಹಿಂದಿ | 03 | 06 |
| 4 | ಇತರೆ | 01 | 02 |
| ಒಟ್ಟು | | 50 | 100 |

ಈ ಕೋಷ್ಟಕದಿಂದ ತಿಳಿದುಬರುವುದೇನೆಂದರೆ, ಕಲಿಕೆಯ ಮಾಧ್ಯಮ ಆಯ್ಕೆಗಳ ಕುರಿತು ವಿದ್ಯಾರ್ಥಿಗಳಲ್ಲಿ ಕೇಳಿದಾಗ ಅದರಲ್ಲಿ ಶೇ.84 ರಷ್ಟು ವಿದ್ಯಾರ್ಥಿಗಳು ಕನ್ನಡ ಮಾಧ್ಯಮವನ್ನು, ಶೇ.8 ರಷ್ಟು ವಿದ್ಯಾರ್ಥಿಗಳು ಇಂಗ್ಲೀಷ ಮಾಧ್ಯಮವನ್ನು, ಶೇ.6 ರಷ್ಟು ವಿದ್ಯಾರ್ಥಿಗಳು ಹಿಂದಿ ಮಾಧ್ಯಮವನ್ನು ಮತ್ತು ಶೇ.2 ರಷ್ಟು ವಿದ್ಯಾರ್ಥಿಗಳು ಇತರೆ ಮಾಧ್ಯಮದಲ್ಲಿ ಕಲಿಯಲು ಇಚ್ಛಿಸುತ್ತಾರೆ.

**ಅರ್ಥ ನಿರೂಪಣೆ :** ಸಂಶೋಧನೆ ಮಾಡಿದ ಪ್ರಕಾರ ಕಲಿಕೆಯ ಆಯ್ಕೆ ವಿಷಯದಲ್ಲಿ ಹೆಚ್ಚು ವಿದ್ಯಾರ್ಥಿಗಳು ತಮ್ಮ ಆಯ್ಕೆಯ ವಿಷಯಗನುಗುಣವಾಗಿ ಕಲಿಯಲು ಇಚ್ಛಿಸುತ್ತಾರೆ.

ಕೋಷ್ಟಕ - 2

**ವಿದ್ಯಾರ್ಥಿಗಳಲ್ಲಿ ಮಾಧ್ಯಮ ಆಯ್ಕೆಯ ಕಾರಣಗಳ ವಿವರ.**

| ಕ್ರ.ಸಂ. | ವಿವರ | ಪ್ರತಿಕ್ರಿಯಿಸುವವರು | ಪ್ರತಿಶತ |
|---|---|---|---|
| 1 | ಮಾತೃಭಾಷೆಯಾದ ಕಾರಣ | 42 | 84 |
| 2 | ಸರಳವಾಗಿ ಅರ್ಥವಾಗುವ ಕಾರಣ | 04 | 08 |
| 3 | ಕಲಿಯಲು ಆಸಕ್ತಿ | 03 | 06 |
| 4 | ಸರಿಯಾದ ಶಿಕ್ಷಣ ವ್ಯವಸ್ಥೆ ಇರುವ ಕಾರಣ | 01 | 02 |
| ಒಟ್ಟು | | 50 | 100 |

ಈ ಕೋಷ್ಟಕದಿಂದ ತಿಳಿದುಬರುವುದೇನೆಂದರೆ, ಶೇ.84 ರಷ್ಟು ವಿದ್ಯಾರ್ಥಿಗಳು ಮಾತೃಭಾಷೆಯಾದ ಕಾರಣ, ಶೇ.8 ರಷ್ಟು ವಿದ್ಯಾರ್ಥಿಗಳು ಸರಳವಾಗಿ ಅರ್ಥವಾಗುವ ಕಾರಣ, ಶೇ.6 ರಷ್ಟು ವಿದ್ಯಾರ್ಥಿಗಳು ಕಲಿಯಲು ಆಸಕ್ತಿ ಹೊಂದಿರುವ ಕಾರಣ ಮತ್ತು ಶೇ.2 ರಷ್ಟು ವಿದ್ಯಾರ್ಥಿಗಳು ಸರಿಯಾದ ಶಿಕ್ಷಣ ವ್ಯವಸ್ಥೆ ಇರುವ ಕಾರಣ ಅವರು ಇಚ್ಛಿಸಿದ ಮಾಧ್ಯಮಗಳಲ್ಲಿ ಕಲಿಯಲು ಇಚ್ಛಿಸುತ್ತಾರೆ ಎಂದು ಕಂಡು ಬರುತ್ತದೆ.

**ಅರ್ಥ ನಿರೂಪಣೆ :** ಈ ಸಂಶೋಧನೆ ಮಾಡಿದ ಪ್ರಕಾರ ಹೆಚ್ಚಿನ ವಿದ್ಯಾರ್ಥಿಗಳು ಅವರು ಕಲಿಯುವ ಮಾಧ್ಯಮ ಮಾತೃಭಾಷೆಯಾಗಿರುವ ಕಾರಣ ಕಂಡು ಬರುತ್ತದೆ.

## ಕೋಷ್ಟಕ – 3

## ಕಲಿಕೆಯ ಕುರಿತು ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡದ ವಿವರ

| ಕ್ರ.ಸಂ. | ವಿವರ | ಪ್ರತಿಕ್ರಿಯಿಸುವವರು | ಪ್ರತಿಶತ |
|---|---|---|---|
| 1 | ಹೌದು | 29 | 58 |
| 2 | ಇಲ್ಲ | 21 | 42 |
| ಒಟ್ಟು | | 50 | 100 |

ಈ ಕೋಷ್ಟಕದಿಂದ ತಿಳಿದುಬರುವುದೇನೆಂದರೆ, ಶೇ.58 ರಷ್ಟು ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ಕಂಡು ಬರುತ್ತದೆ ಎಂದು ಹೇಳಿದರೆ, ಶೇ.42 ರಷ್ಟು ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ಕಂಡು ಬರುವುದಿಲ್ಲ ಎಂದು ಕಂಡುಬರುತ್ತದೆ.

**ಅರ್ಥ ನಿರೂಪಣೆ :** ಮಾನಸಿಕ ಒತ್ತಡ ಇರುವ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚಾಗಿ ಇದೆ ಎಂದು ತಿಳಿದು ಬರುತ್ತದೆ.

ಕೋಷ್ಟಕ – 4

## ಕಲಿಕಾ ವಿಷಯಗಳಲ್ಲಿ ಮಾನಸಿಕ ಒತ್ತಡ

| ಕ್ರ.ಸಂ. | ವಿವರ | ಪ್ರತಿಕ್ರಿಯಿಸುವವರು | ಪ್ರತಿಶತ |
|---|---|---|---|
| 1 | ಕನ್ನಡ – ಇಂಗ್ಲೀಷ | 16 | 32 |
| 2 | ಹಿಂದಿ – ಗಣಿತ | 25 | 50 |
| 3 | ಸಮಾಜ ವಿಜ್ಞಾನ | 08 | 16 |
| 4 | ಮೇಲಿನ ಎಲ್ಲಾ | 01 | 02 |
| ಒಟ್ಟು | | 50 | 100 |

ಈ ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ, ಕಲಿಕಾ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ವಿದ್ಯಾರ್ಥಿಗಳಿಗೆ ಹಿಂದಿ–ಗಣಿತದಲ್ಲಿ, ಶೇ.32 ರಷ್ಟು ಕನ್ನಡ–ಇಂಗ್ಲೀಷನಲ್ಲಿ, ಶೇ.16 ರಷ್ಟು ಸಮಾಜ ವಿಜ್ಞಾನಗಳಲ್ಲಿ ಮತ್ತು ಶೇ.2 ರಷ್ಟು ವಿದ್ಯಾರ್ಥಿಗಳಲ್ಲಿ ಎಲ್ಲಾ ವಿಷಯಗಳಲ್ಲಿ ಮಾನಸಿಕ ಒತ್ತಡ ಇರುವುದು ಕಂಡು ಬರುತ್ತದೆ.

**ಅರ್ಥ ನಿರೂಪಣೆ :** ಹೆಚ್ಚಿನ ವಿದ್ಯಾರ್ಥಿಗಳು ಮಾನಸಿಕವಾಗಿ ಹಿಂದಿ ಭಾಷೆಯು ಮಾತೃಭಾಷೆಯಾಗಿರದ ಕಾರಣ ಮತ್ತು ಗಣಿತ ವಿಷಯವು ಕಬ್ಬಿಣದ ಕಡಲೆ ಎಂದು ತಿಳಿದುಕೊಂಡಿರುವುದು ಕಂಡುಬರುತ್ತದೆ.

ಕೋಷ್ಟಕ – 5

## ಮಾನಸಿಕ ಒತ್ತಡದಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ

| ಕ್ರ.ಸಂ. | ವಿವರ | ಪ್ರತಿಕ್ರಿಯಿಸುವವರು | ಪ್ರತಿಶತ |
|---|---|---|---|
| 1 | ಹೌದು | 26 | 52 |
| 2 | ಇಲ್ಲ | 24 | 48 |
| ಒಟ್ಟು | | 50 | 100 |

ಈ ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ, ಮಾನಸಿಕ ಒತ್ತಡದಿಂದ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರಿದೆಯೇ ಎಂದು ಕೇಳಿದಾಗ ಶೇ.52 ರಷ್ಟು ವಿದ್ಯಾರ್ಥಿಗಳು ಹೌದು ಎಂದು ಹೇಳಿದರೆ, ಶೇ.48 ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ಹೇಳಿರುವುದು ಕಂಡು ಬರುತ್ತದೆ.

**ಅರ್ಥ ನಿರೂಪಣೆ :** ಮಾನಸಿಕ ಒತ್ತಡವು ಎಲ್ಲರ ಮೇಲೆಯೂ ಒಂದಲ್ಲ ಒಂದು ರೀತಿಯಲ್ಲಿ ಪರಿಣಾಮ ಬೀರುವಂತಹದೆ ಆಗಿದೆ. ಅದೇ ರೀತಿ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರಿರಿವುದು ಕಂಡು ಬರುತ್ತದೆ.

## 5.4 ಅನುಬಂಧ

# ಆಧಾರ ಗ್ರಂಥಗಳು

1) ಭಾರತದಲ್ಲಿ ಶಿಕ್ಷಣ ಮತ್ತು ವಿಚಲಿತ ಸಮಸ್ಯೆಗಳು – ಎಸ್. ಬಿ. ಯಾದವಾಡ

2) ಶೈಕ್ಷಣಿಕ ಮನೋವಿಜ್ಞಾನ – ಡಾ. ಹೆಚ್.ಪ್ಪಿ. ಮಹಾದೇವಪ್ಪಾ

3) ಶೈಕ್ಷಣಿಕ ಮನೋವಿಜ್ಞಾನ – ಆರ್. ಜೆ. ಪ್ರಭು

4) ಸಾಮಾಜಿಕ ಸಂಶೋಧನಾ ಕೈಪಿಡಿ – ಚ. ನ. ಶಂಕರರಾವ